
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಜುಲೈ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 131 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾನುವಾರ ಮುಕ್ತಾಯಗೊಂಡ ಫಿಫಾ ವಿಶ್ವಕಪ್ 2026ರ ಫೈನಲ್ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಅರ್ಜೆಂಟೀನಾ ತಂಡ ಸೋತಿರುವುದು ಅಗಾಧ ನೋವು ತಂದಿದೆ ಎಂದು ಲಯೊನೆಲ್ ಮೆಸ್ಸಿ ತಿಳಿಸಿದ್ದಾರೆ.



ನೀಟಾಗಿ ನಡೆಯಲಿಲ್ಲವೇ ಜಿರಳೆ ಹೋರಾಟ ? » 2


ಶಿಸ್ತು, ಸಂಸ್ಕಾರ, ಆತ್ಮ ವಿಶ್ವಾಸದಿಂದ ಯಶಸ್ಸು ಸಾಧ್ಯ » 3


ಕೃಷಿ ಬಳಕೆಗಿಲ್ಲ ಹೇಮಾವತಿ ಅಣೆಕಟ್ಟೆ ನೀರು » 4


# ಪ್ರಧಾನಿ ನಿವಾಸದ ಬಳಿ ಕೈ ನಾಯಕರ ಧರಣಿ

## ರಾಹುಲ್ , ಪ್ರಿಯಾಂಕಾ ಗಾಂಧಿ, ಅಖಿಲೇಶ್ ಸೇರಿ ಪ್ರಮುಖರನ್ನು ವಶಕ್ಕೆ ಪಡೆದ ಪೊಲೀಸರು

• ಪ್ರಜೋದಯ ವರದಿ

**ನವದೆಹಲಿ:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣ, ಯುವ ಪ್ರತಿಭಟನಾಕಾರರ ಮೇಲಿನ ಪೊಲೀಸ್ ದೌರ್ಜನ್ಯ ಖಂಡಿಸಿ ಪ್ರಧಾನಿ ನಿವಾಸದ ಬಳಿ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿ ಹಲವು ಪ್ರಮುಖ ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಂಗಳವಾರ ರಾತ್ರಿ ಇಡೀ ಪ್ರಧಾನಿ ನಿವಾಸದ ಹೊರಗೆ ಧರಣಿ ಮುಂದುವರಿಸುವುದಾಗಿ ಕಾಂಗ್ರೆಸ್ ನಾಯಕರು ಘೋಷಿಸಿದ್ದರು. ಸಂಜೆ 7 ಗಂಟೆ ವೇಳೆಗೆ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಭದ್ರತಾ ಪಡೆಗಳ ಜೊತೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪ್ರತಿಭಟನಾನಿರತರನ್ನು ತೆರವುಗೊಳಿಸಲು ಆರಂಭಿಸಿದರು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ರಸ್ತೆಯ ಮೇಲೆಯೇ ಕುಳಿತು, ತಮ್ಮ ಬೇಡಿಕೆಗಳು ಈಡೇರುವವರೆಗೆ ಆ ಜಾಗದಿಂದ ಕದಲುವುದಿಲ್ಲವೆಂದು ಪಟ್ಟು ಹಿಡಿದರು. ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು



ಕೂಡ ಭಾಗವಹಿಸಿದ್ದರು.

ರಾಹುಲ್ ಅವರನ್ನು 10ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಸುತ್ತುವರಿದು ಬಲವಂತವಾಗಿ ಸ್ಥಳದಿಂದ ಹೊತ್ತುಕೊಂಡೇ ಬಸ್‌ನಲ್ಲಿ ಕರೆದುಕೊಂಡು ಹೋದರು. ಪೊಲೀಸರ ಈ ಕ್ರಮ ತೀವ್ರವಾಗಿ ಖಂಡಿಸಿರುವ ಕಾಂಗ್ರೆಸ್ ಹಾಗು ಇಂಡಿಯಾ ಕೂಟದ ನಾಯಕರು, ಸರ್ಕಾರವು ಯುವಜನರ ಮತ್ತು ವಿದ್ಯಾರ್ಥಿಗಳ ಧ್ವನಿಯನ್ನು ಅಡಗಿಸಲು ಪ್ರಜಾಪ್ರಭುತ್ವ ವಿರೋಧಿ ಮಾರ್ಗಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಇದಕ್ಕೂ ಮುನ್ನಾ ಮಾತನಾಡಿದ ರಾಹುಲ್ ಗಾಂಧಿ ಅವರು, ವಿದ್ಯಾರ್ಥಿಗಳ ಮೇಲಿನ ದಾಳಿಯು ಪ್ರತಿಯೊಂದು ಭಾರತೀಯ ಕುಟುಂಬದ ಮೇಲಿನ ದಾಳಿಯಾಗಿದೆ. ಯಾವುದೇ ಉತ್ತರ ನೀಡದೆ ಅಥವಾ ಪರಿಣಾಮಗಳನ್ನು ಎದುರಿಸದೆ ತಾವು ಪಾರಾಗಬಹುದು ಎಂದು ಪ್ರಧಾನಿ ಮೋದಿ ಭಾವಿಸಿದ್ದಾರೆ. ಆದರೆ ಅದು ಈ ಬಾರಿ ಖಂಡಿತವಾಗಿಯೂ ಸಾಧ್ಯವಿಲ್ಲ. ನಮ್ಮ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕೆಂದು ನಂಬುವ ಪ್ರತಿಯೊಬ್ಬ ದೇಶಭಕ್ತ ಭಾರತೀಯರೂ ನಮ್ಮೊಂದಿಗೆ ಕೈಜೋಡಿಸಿ ಎಂದು ಕೇಳಿಕೊಂಡರು.

ಭಾರತದ ಯುವಜನತೆಯ ಭವಿಷ್ಯವನ್ನು ನಾಶ ಪಡಿಸಿರುವ ಕಾರಣಕ್ಕಾಗಿ ಪ್ರಧಾನಿ, ಗೃಹ ಸಚಿವರು ರಾಜೀನಾಮೆ ನೀಡಬೇಕೆಂದು ರಾಹುಲ್ ಎಕ್ಸ್‌ನಲ್ಲಿ ಒತ್ತಾಯಿಸಿದ್ದಾರೆ.

ಮಂಗಳವಾರ ಮಧ್ಯಾಹ್ನವೇ ಆರಂಭವಾದ ಪ್ರತಿಭಟನೆ, ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್, ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯ ಕರ್ತರು ಖರ್ಗೆ ನಿವಾಸದಿಂದ ಒಂದು ಕಿಲೋ ಮೀಟರ್ ದೂರದಲ್ಲಿರುವ ಲೋಕ ಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿಯವರ ನಿವಾಸದತ್ತ ಮೆರವಣಿಗೆ ನಡೆಸಿದರು.

ಈ ಮಧ್ಯೆ ಪ್ರಧಾನ ಮಂತ್ರಿ ಕಚೇರಿಯ ರಾಜ್ಯ ಸಚಿವ ಜಿತೇಂದ್ರ ಸಿಂಗ್, ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಪ್ರಧಾನ ಮಂತ್ರಿಯವರ ನಿವಾಸದ ಹೊರಗೆ ನಡೆಯುತ್ತಿರುವ ಪ್ರತಿಭಟನೆಯನ್ನು ಕೈಬಿಡುವಂತೆ ಮನವಿ ಮಾಡಿದ್ದಾರೆ. ಆದರೆ, ಪ್ರತಿಭಟನೆ ಅಂತ್ಯಗೊಳಿಸಲು ರಾಹುಲ್ ಗಾಂಧಿ ನಿರಾಕರಿಸಿದರು.

### ಕಾಂಗ್ರೆಸ್‌ನ ಪ್ರಮುಖ ಬೇಡಿಕೆಗಳು

- ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ
- ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಕುರಿತು ಸಂಸತ್‌ನಲ್ಲಿ ಚರ್ಚೆ
- ಲಾಠಿ ಚಾರ್ಜ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ಹೇಳಿಕೆ ನೀಡಬೇಕು.
- ಪೊಲೀಸ್ ಕ್ರಮದ ಬಗ್ಗೆ ಸ್ವತಂತ್ರ ತನಿಖೆ
- ಗಾಯಗೊಂಡ ಎಲ್ಲಾ ಪ್ರತಿಭಟನಾಕಾರರಿಗೆ ವೈದ್ಯಕೀಯ ಚಿಕಿತ್ಸೆ,
- ಪೊಲೀಸ್ ಕ್ರಮದ ಸಮಯದಲ್ಲಿ ಗಾಯಗೊಂಡ ವಿದ್ಯಾರ್ಥಿಗಳಿಗೆ ಪರಿಹಾರ

### ಆರೋಪಿಗಳ ವಿರುದ್ಧ ಕಠಿಣ ಕ್ರಮ: ಮೋದಿ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ಯುವಕರ ಭವಿಷ್ಯದೊಂದಿಗೆ ಯಾರೂ ಆಟವಾಡಲು ಅವಕಾಶ ನೀಡುವುದಿಲ್ಲ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜಕೀಯ ಭೇದ ಮರೆತು ಒಟ್ಟಾಗಿ ಕೆಲಸ ಮಾಡಬೇಕೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

# ಪತ್ನಿ ನೆನೆದು ಭಾವುಕರಾದ ಗೌಡರು



■ ಚನ್ನಮ್ಮ ಸಮಾಧಿ ಬಳಿ ನಿತ್ಯ ವಿಷ್ಣು ಸಹಸ್ರನಾಮ ಪಠಣ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಮಾವಿನಕೆರೆ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನ ಮಣ್ಣಲ್ಲಿ ಮಣ್ಣಾಗಿರುವ ಶ್ರೀಮತಿ ಚನ್ನಮ್ಮ ಅವರ ಸಮಾಧಿಗೆ ಪತಿ ಹೆಚ್.ಡಿ.ದೇವೇಗೌಡ ಸೇರಿ ಕುಟುಂಬದ ಎಲ್ಲಾ ಸದಸ್ಯರು, ಬಂಧು ಮಿತ್ರರು ಮಂಗಳವಾರ ಪೂಜೆ ಸಲ್ಲಿಸಿದರು.

ಅಂತ್ಯಕ್ರಿಯೆ ಬಳಿಕ ಹರದನಹಳ್ಳಿಯ ನಿವಾಸದಲ್ಲೇ ತಂಗಿದ್ದ ಹೆಚ್.ಡಿ.ದೇವೇಗೌಡ ಅವರು ಬೆಳಿಗ್ಗೆ ಪುತ್ರರಾದ ಡಾ. ಹೆಚ್.ಡಿ.ರಮೇಶ್, ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ಬಾಲಕೃಷ್ಣ, ಹೆಚ್.ಡಿ.ರೇವಣ್ಣ, ಪುತ್ರಿಯರಾದ ಅನುಸೂಯ, ಶೈಲಜಾ ಹಾಗು ಇತರರೊಂದಿಗೆ ಸಮಾಧಿ ಸ್ಥಳಕ್ಕೆ ಆಗಮಿಸಿದರು.

ಶ್ರೀಮತಿ ಚನ್ನಮ್ಮ ಅವರ ಸಮಾಧಿ ಹತ್ತಿರಕ್ಕೆ ಬರುತ್ತಿದ್ದಂತೆ ಪುರೋಹಿತರನ್ನು ಬಳಿಗೆ ಕರೆದು ನಂದಾ ದೀಪ ಆರದಂತೆ ನೋಡಿಕೊಳ್ಳಿ ಎಂದರು. ದನಿಗೂಡಿಸಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು 11ನೇ ದಿನದ ಕಾರ್ಯ ಮುಗಿಯುವವರೆಗೆ ದೀಪ ಉರಿಯುತ್ತಿರಬೇಕು ಹಾಗು ಪ್ರತಿದಿನ ವಿಷ್ಣು ಸಹಸ್ರನಾಮ ಪಠಣ ನಡೆಸುವಂತೆ ಸಲಹೆ ನೀಡಿದರು.

ಶಿವಭಕ್ತೆಯಾಗಿದ್ದ ಚನ್ನಮ್ಮ ಸಮಾಧಿ ಎದುರು ಶಿವನಿಗೆ ಪ್ರಿಯವಾದ ರುದ್ರ, ಚಮಕ ಶ್ಲೋಕಗಳನ್ನು ಅರ್ಚಕರು ಪಠಿಸಿದರು. ಮೂವರು ಅರ್ಚಕರು ಶ್ಲೋಕಗಳ ಉದ್ಘೋಷಣೆ ಮೂಲಕ ನಮನ ಸಲ್ಲಿಸಿದರು. ಈ ವೇಳೆ ಆಗಸದಲ್ಲಿ ಗರುಡ ಪ್ರತ್ಯಕ್ಷವಾಗಿ ಸಮಾಧಿ ಸುತ್ತ ಪ್ರದಕ್ಷಿಣೆ ಹಾಕಿದ್ದು ಅಚ್ಚರಿ ಮೂಡಿಸಿತು.

ಶ್ರೀಮತಿ ಚನ್ನಮ್ಮ ಕುಟುಂಬದ ಎಲ್ಲಾ ಮಕ್ಕಳು, ಸೊಸೆಯಂದಿರು ಸಮಾಧಿ ಭಾವುಕರಾದರು. ಹೆಚ್.ಡಿ.ದೇವೇಗೌಡ ಅವರು ತದೇಕಚಿತ್ತದಿಂದ ಸಮಾಧಿಯತ್ತಲೇ ನೋಡುತ್ತಾ ಕುಳಿತಿದ್ದು, ನೋಡುಗರ ಕಣ್ಣಾಲಿಗಳನ್ನು ತೇವವಾಗಿಸಿತು. ದೇವೇಗೌಡರ ಬಳಿಗೆ ತೆರಳಿದ ಮಕ್ಕಳು ಸಾಂತ್ವನ ಹೇಳಿದರು.

ಮಗಳು ಅನುಸೂಯ ಸಮಾಧಿ ಮುಂದೆ ಒಬ್ಬಂಟಿಯಾಗಿ ಕುಳಿತು ವೇದ ಮಂತ್ರ ಪಠಿಸಿದರು. ಬುಧವಾರ ಬೆಳಿಗ್ಗೆ 9.30ಕ್ಕೆ ಹಾಲು ತುಪ್ಪ ಕಾರ್ಯ ನೆರವೇರಲಿದೆ. ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಪುತ್ರಿಯರಾದ ಶೈಲಜಾ, ಸೊಸೆಯಂದಿರಾದ ಭವಾನಿ, ಭವಾನಿ, ದೇವೇಗೌಡರ ಒಡನಾಡಿ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ ಹಾಜರಿದ್ದರು.

# ಮಾವಿನಕೆರೆ ಬೆಟ್ಟದಲ್ಲಿ ಶ್ರೀಮತಿ ಚನ್ನಮ್ಮ ಸ್ಮಾರಕ

## ಇಂದು ಸಮಾಧಿಗೆ ಹಾಲು ತುಪ್ಪ ಕಾರ್ಯ : ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪ್ರಪಂಚವಿರುವವರೆಗೆ ನಮ್ಮ ತಂದೆ-ತಾಯಿಯ ಸೇವೆ ಚಿರಸ್ಥಾಯಿಯಾಗಿ ಉಳಿಯಬೇಕೆಂಬ ಉದ್ದೇಶದಿಂದ ತಾಯಿ ಚನ್ನಮ್ಮ ಅವರ ಸಮಾಧಿ ಸ್ಥಳವನ್ನು ಸ್ಮಾರಕವಾಗಿ ಅಭಿವೃದ್ಧಿ ಪಡಿಸುವ ಕುರಿತು 11ನೇ ದಿನದ ಕಾರ್ಯದಂದು ಬಹಿರಂಗ ಪಡಿಸುವುದಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಮಂಗಳವಾರ ಮಾತನಾಡಿದ ಅವರು, ದೇವೇಗೌಡರ ನಾಲ್ವರು ಪುತ್ರರು, ಪುತ್ರಿಯರು, ನಮ್ಮ ಜೊತೆಯಲ್ಲಿ ಬೆಳೆದ ಸಹೋದರರು, ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸಿ ಈ ಸ್ಥಳ ಅಭಿವೃದ್ಧಿ ಪಡಿಸಬೇಕು. ಕೇವಲ ಸ್ಮಾರಕ ಮಾತ್ರವಲ್ಲದೆ ಐತಿಹಾಸಿಕ ಜಾಗ ಇದಾಗಬೇಕು. ಎಲ್ಲರ ಬದುಕಿಗೆ ದಾರಿ ದೀಪವಾಗಬೇಕೆಂಬ ನಿಟ್ಟಿನಲ್ಲಿ ಸಹೋದರರು ಒಟ್ಟಾಗಿ ಚರ್ಚಿಸಿದ್ದೇವೆ. ಈ ವಿಷಯದಲ್ಲಿ ರಾಜಕೀಯ ಒತ್ತಡ, ದ್ವೇಷ ಇರಬಾರದು. ಬೆಟ್ಟದ ರಂಗನಾಥಸ್ವಾಮಿ ಪಕ್ಕದಲ್ಲಿ ಸಮಾಧಿ ಮಾಡಿದ್ದೇವೆ. ಸರ್ವ ಜನಾಂಗದ ಶಾಂತಿಯ ತೋಟವಾಗಿ ಈ ಸ್ಥಳ ಬದಲಾಗಬೇಕು. ರಾಜಕೀಯ ಹಂಗಿಲ್ಲದೆ ಯಾರು ಬೇಕಾದರೂ ಇಲ್ಲಿಗೆ ಬರುವಂತಾಗಬೇಕು. ಪಕ್ಷ, ಜಾತಿ ಬೇಧ ಮರೆತು ಈ ಪವಿತ್ರ ಸ್ಥಳದಲ್ಲಿ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯಬೇಕು. ಆ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ ಎಂದರು.

**ನಮ್ಮ ಕುಟುಂಬದಲ್ಲೂ ಭಿನ್ನಾಭಿಪ್ರಾಯಗಳಿವೆ**

ಎಲ್ಲರ ಕುಟುಂಬದಲ್ಲಿ ಭಿನ್ನಾಭಿಪ್ರಾಯವಿರುವಂತೆ ನಮ್ಮ

» ನಾಲ್ಕನೇ ಪುಟದಲ್ಲಿ



### ಉದ್ದೇಶ ಪೂರ್ವಕವಾಗಿ ಸಿಎಂ ಹೆಸರು ಬಿಟ್ಟಿಲ್ಲ

**ಹಾಸನ:** ತಾಯಿ ಚನ್ನಮ್ಮ ಅವರ ಅಂತ್ಯಕ್ರಿಯೆ ವೇಳೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸದೆ ಇರುವುದರ ಕುರಿತು ಕೆಲವರು ನನ್ನ ಗಮನಕ್ಕೆ ತಂದಿದ್ದಾರೆ. ಉದ್ದೇಶ ಪೂರ್ವಕವಾಗಿ ಅವರ ಹೆಸರು ಬಿಟ್ಟಿಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಜನರು ಸಮಾಧಾನದಿಂದ ಇರಬೇಕೆಂದು ಹೇಳಲು ಆ ಸಂದರ್ಭದಲ್ಲಿ ನಾನು ಮೈಕ್ ಹಿಡಿದಿದ್ದೆ. ನಾನು ಏನು ಮಾತನಾಡುತ್ತಿದ್ದೇನೆಂಬುದರ ಬಗ್ಗೆ ನನಗೆ ಸ್ಪಷ್ಟತೆ ಇರಲಿಲ್ಲ, ದೇವರೇ ನನ್ನಿಂದ ಆ ಪದಗಳನ್ನು ಆಡಿಸಿದ್ದಾನೆ. ಆ ಪದ ಬಳಸದಿರುವ ಸಣ್ಣತನವನ್ನು ನಾನು ತೋರಿಸುವುದಿಲ್ಲ, ನಾನು ಉದ್ದೇಶ ಪೂರ್ವಕವಾಗಿ ಡಿ.ಕೆ.ಶಿವಕುಮಾರ್ ಅವರ ಹೆಸರನ್ನು ಹೇಳದೇ ಇರಲಿಲ್ಲ, ಈ ವಿಚಾರದಲ್ಲಿ ಯಾರೂ ತಪ್ಪು ತಿಳಿಯಬಾರದೆಂದು ಮನವಿ ಮಾಡುತ್ತೇನೆಂದರು.

> **ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಬಂದರೂ ಒಗ್ಗಟ್ಟಾಗಿ ಬದುಕಬೇಕೆಂಬುದು ನಮ್ಮ ಸಂದೇಶ. ಪ್ರತಿದಿನ ನಾವು ಸಂಬಂಧಗಳ ಅರ್ಥವನ್ನು ಕಳೆದು ಕೊಳ್ಳುತ್ತಿದ್ದೇವೆ. ಜೀವನದಲ್ಲಿ ತಪ್ಪಾದಾಗ ಪಶ್ಚಾತ್ತಾಪಪಟ್ಟು ಅದನ್ನು ಸರಿಪಡಿಸಿಕೊಳ್ಳುವ ಕೆಲಸ ವನ್ನು ಪ್ರತಿಯೊಂದು ಕುಟುಂಬವೂ ಮಾಡ ಬೇಕು. ಇದೇ ನಾಡಿನ ಜನರ ಆಶಯವೂ ಆಗಿದೆ.**
> **-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

# ಎತ್ತಿನಹೊಳೆ ಸಂತ್ರಸ್ತರ ದಯ ಪರಿಹಾರಕ್ಕೆ ಅಧಿಕಾರಿಗಳ ಕೊಕ್ಕೆ

**-ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ಎತ್ತಿನಹೊಳೆ ಯೋಜನೆಗಾಗಿ ಬೇಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಸ್ವಾಧೀನಪಡಿಸಿಕೊಂಡಿರುವ ಸಂತ್ರಸ್ತ ರೈತರ ಭೂಮಿಗೆ ಸಚಿವ ಸಂಪುಟದಲ್ಲಿ 28 ಕೋ.ರೂ. ಎಕ್ಸ್‌ಗ್ರೇಷಿಯಾ (ದಯಪರಿಹಾರ) ಬಿಡುಗಡೆ ಮಾಡಿ ವರ್ಷವೇ ಕಳೆದರೂ ಪರಿಹಾರ ವಿತರಣೆ ಮಾಡದೆ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತಾಳಿದ್ದಾರೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆ ಕಾಮಗಾರಿಗಾಗಿ ಬೇಲೂರು ತಾಲ್ಲೂಕಿನ ನಾಯಕನಕೆರೆ, ಶಿವಪುರ ಕಾವಲು, ಐದಳ್ಳಕಾವಲು ಗ್ರಾಮಗಳ ನೂರಾರು ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ, ಈ ಜಮೀನಿಗೆ ಸಂಬಂಧಪಟ್ಟಂತೆ ಬಹುತೇಕ ರೈತರ ಬಳಿ ಸರಿಯಾದ ದಾಖಲೆಗಳಿಲ್ಲ. ಪ್ರಸ್ತುತ ಐದಳ್ಳಕಾವಲು ವ್ಯಾಪ್ತಿಯ 103 ರೈತರಿಗೆ ದಯಪರಿಹಾರ ನೀಡಲು ಸರ್ಕಾರವೇ ಸೂಚಿಸಿದ್ದರೂ, ಅಧಿಕಾರಿಗಳು ಸಬೂಬು ಹೇಳಿಕೊಂಡು ಸತಾಯಿಸುತ್ತಲೇ ಇದ್ದಾರೆ.

» ನಾಲ್ಕನೇ ಪುಟದಲ್ಲಿ



### ಏನಿದು ಎಕ್ಸ್‌ಗ್ರೇಷಿಯಾ ?

ಯಾವುದೇ ಕಾನೂನು ಬದ್ಧತೆ ಅಥವಾ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳದೆ, ಕೇವಲ ಮಾನವೀಯತೆಯ ಆಧಾರದ ಮೇಲೆ ಸರ್ಕಾರ ಅಥವಾ ಸಂಸ್ಥೆ ಸ್ವಯಂ ಪ್ರೇರಿತವಾಗಿ ದಯಪೂರ್ವಕವಾಗಿ, ಅನುಗ್ರಹ ಪೂರ್ವಕವಾಗಿ ಅಥವಾ ಕೃಪಾ ಪೂರ್ವಕವಾಗಿ (ಎಕ್ಸ್ ಗ್ರೇಷಿಯಾ) ನೀಡುವ ಹಣಕಾಸಿನ ಪರಿಹಾರವನ್ನು ದಯ ಪರಿಹಾರವೆಂದು ಕರೆಯುತ್ತಾರೆ. ಆ ಪ್ರಕಾರ, ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡ ರೈತರ ಬಳಿ ಅಗತ್ಯ ದಾಖಲೆಗಳಿಲ್ಲದಿದ್ದರೂ ಸರ್ಕಾರ ಅವರಿಗೆ ದಯಪರಿಹಾರ ನೀಡಲು ಮುಂದಾಗಿದೆ.



> **ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು 28 ಕೋ. ರೂ. ಬಿಡುಗಡೆ ಮಾಡಲಾಗಿದೆ. ಮುಂದಿನ ಏಳೆಂಟು ದಿನಗಳಲ್ಲಿ ಅಧಿಕಾರಿಗಳು ಸಂತ್ರಸ್ತ ರೈತರ ದಾಖಲೆಗಳನ್ನು ಪರಿಶೀಲಿಸಿ ಶೀಘ್ರದಲ್ಲೇ ಪರಿಹಾರ ಬಿಡುಗಡೆ ಮಾಡಲಿದ್ದಾರೆ.**
> **-ಕೆ.ಎಂ. ಶಿವಲಿಂಗೇಗೌಡ, ಶಾಸಕ**

> **ಎತ್ತಿನಹೊಳೆ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ನಾಯಕನಕೆರೆ, ಶಿವಪುರ ಕಾವಲು ಹಾಗೂ ಐದಳ್ಳಕಾವಲು ಗ್ರಾಮಗಳ ದ್ವಿಹಕ್ಕು ಪರಿಹಾರ ನೀಡಲು ಸಚಿವ ಸಂಪುಟದಲ್ಲಿ ಆದೇಶವಾಗಿದೆ. ಅದರಲ್ಲಿ ಕೆಲ ರೈತರಿಗೆ ಭೂಮಂಜೂರಾತಿಯಾಗಿದ್ದು, ಕೆಲವರಿಗೆ ಭೂಮಂಜೂರಾತಿಯಾಗಿಲ್ಲ. ಭೂಮಂಜೂರಾತಿಯಾಗದಿರುವ ರೈತರಿಗೆ ಯಾವ ರೀತಿ ಪರಿಹಾರ ನೀಡಬೇಕೆಂಬ ಕುರಿತು ಸರ್ಕಾರದ ಬಳಿ ಸಲಹೆ ಕೇಳಿದ್ದೇವೆ.**
> **-ರಜನಿಕಾಂತ್, ವಿಶೇಷ ಭೂಸ್ವಾಧೀನಾಧಿಕಾರಿ, ಎತ್ತಿನಹೊಳೆ ಯೋಜನೆ**

### ಸಿಎಂಗೆ ಗೌಡರ ಕುಟುಂಬದ ಧನ್ಯವಾದ

**ಬೆಂಗಳೂರು :** ಚನ್ನಮ್ಮ ಅವರ ಅಂತಿಮ ಸಂಸ್ಕಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಿದ ಹಿನ್ನಲೆಯಲ್ಲಿ ಅವರ ಹಿರಿಯ ಪುತ್ರ ಹೆಚ್.ಡಿ.ಬಾಲಕೃಷ್ಣೇಗೌಡ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ತಾಯಿಯ ಅಗಲಿಕೆಯ ದುಃಖದ ನಡುವೆಯೂ, ಸರ್ಕಾರ ತೋರಿದ ಗೌರವಕ್ಕೆ ಕೃತಜ್ಞತೆ ಸಲ್ಲಿಸಿರುವ ಈ ಪತ್ರವು ಅತ್ಯಂತ ಭಾವನಾತ್ಮಕವಾಗಿದೆ. ತಾಯಿಯ ನಿಸ್ವಾರ್ಥ ಸೇವೆಗೆ ಸಿಕ್ಕ ಗೌರವಕ್ಕೆ ಕೃತಜ್ಞತೆ ಹೇಳಿದ್ದಾರೆ.

# ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ದೆಹಲಿಯ ಜಂತರ್-ಮಂತರ್‌ನಲ್ಲಿ ಹೋರಾಟದಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿರುವುದನ್ನು ಖಂಡಿಸಿ, ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ನಗರದ ಹೇಮಾವತಿ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಒ ಕಾರ್ಯದರ್ಶಿ ಸುಷ್ಮಾ ಅವರು ಮಾತನಾಡಿ, ನೀಟ್ ಪರೀಕ್ಷೆಯ ಅಕ್ರಮ ಖಂಡಿಸಿ ಸಂಸದ್



ಚಲೋ ಭಾಗವಾಗಿ ಸಂಸತ್ತಿನತ್ತ ತೆರಳುತ್ತಿದ್ದ ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್ ಖಂಡನೀಯವೆಂದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯನ್ನು ಒತ್ತಾಯಿಸಿ ವಿದ್ಯಾರ್ಥಿಗಳು ಮತ್ತು ಯುವಕರು ಸೇರಿದ್ದರು. ಈ ಸಂಸತ್ ಮೆರವಣಿಗೆಯನ್ನು ಬಹಳ ಹಿಂದೆಯೇ ಘೋಷಿಸಲಾಗಿದ್ದರೂ, ಪೊಲೀಸರು ಅನುಮತಿ ನಿರಾಕರಿಸಿದ್ದರು. ಪ್ರಜಾಪ್ರಭುತ್ವ ಸಮಾಜದಲ್ಲಿ ಪ್ರತಿಭಟನೆ ಮಾಡುವುದು ಮೂಲಭೂತ ಹಕ್ಕು. ಪ್ರತಿಭಟಕಾರರ ಮೇಲಿನ ಪೊಲೀಸ್ ಕ್ರಮವು ಅಪ್ರಜಾಸತಾತ್ಮಕ ಮಾತ್ರವಲ್ಲದೆ, ಪ್ರಜಾಸತಾತ್ಮಕ ದೇಶದ ಆಶಯಗಳಿಗೆ ವಿರುದ್ಧವಾಗಿದೆ. ಪೊಲೀಸ್ ಕ್ರಮ ಮತ್ತು ಕೇಂದ್ರ ಸರ್ಕಾರದ ಧೋರಣೆಯನ್ನು ವಿರೋಧಿಸಿ ದೇಶದ ಸಮಗ್ರ ವಿದ್ಯಾರ್ಥಿ ಸಮುದಾಯ ಧ್ವನಿ ಎತ್ತಬೇಕೆಂದು ಮನವಿ ಮಾಡಿದರು.

ನೀಟ್ ಪರೀಕ್ಷೆಯಲ್ಲಿನ ಅಕ್ರಮದ ಹಿನ್ನಲೆ ಕೇಂದ್ರ ಶಿಕ್ಷಣ ಸಚಿವ

» ನಾಲ್ಕನೇ ಪುಟದಲ್ಲಿ

## ಅರ್ಹರ ಪತ್ತೆಗೆ ಮಿನಾಮೇಷ | ನಿತ್ಯ ಕಚೇರಿಗೆ ಫಲಾನುಭವಿಗಳ ಅಲೆದಾಟ

# ಗೃಹಲಕ್ಷ್ಮಿ: ಜಿಲ್ಲೆಯಲ್ಲಿ 6698 ಐಟಿ-ಜಿಎಸ್‌ಟಿ ಪಾವತಿದಾರರು

**-ಮಲ್ಲಿಕಾರ್ಜುನ ಕೊಚ್ಚರಗಿ**

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಗೃಹಲಕ್ಷ್ಮಿ ಯೋಜನೆಯಡಿ ಐಟಿ ಮತ್ತು ಜಿಎಸ್‌ಟಿ ಪಾವತಿದಾರರೆಂದು ಜಿಲ್ಲೆಯಾದ್ಯಂತ 6698 ಮಹಿಳೆಯರನ್ನು ಗುರುತಿಸಿ ಅವರನ್ನು ಯೋಜನೆಯಿಂದ ಹೊರಗಿಡಲಾಗಿದೆ.

ಐಟಿ ಮತ್ತು ಜಿಎಸ್‌ಟಿ ಎಂದರೆ ಏನೆಂದು ಗೊತ್ತಿಲ್ಲದೆ ಬ್ಯಾಂಕ್‌ನಲ್ಲಿ ಸಾಲ ಪಡೆಯುವ ಕಾರಣಕ್ಕೆ ನಡೆಸಿದ ಪ್ರಕ್ರಿಯೆಯಿಂದ ಅನೇಕರು ಐಟಿ, ಜಿಎಸ್‌ಟಿದಾರರ ಪಟ್ಟಿಗೆ ಸೇರಿದ್ದಾರೆ. ಇಂತಹವರಿಂದ ಗೃಹಲಕ್ಷ್ಮಿ ಯೋಜನೆ ದೂರ ಉಳಿದಿದ್ದು, ಅರ್ಹರಿಗೆ ಹಣ ತಲುಪುತ್ತಿಲ್ಲ.

ಮನೆ ಸಾಲ, ನಿವೇಶನಕ್ಕಾಗಿ ಬ್ಯಾಂಕ್ ಲೋನ್ ಪಡೆದವರು ಐಟಿ ಮಾಡಿಸುವುದು ಕಡ್ಡಾಯವಾದ್ದರಿಂದ ಆ ಪ್ರಕ್ರಿಯೆಗೆ ಒಳಪಟ್ಟಿದ್ದಾರೆ. ಈ ರೀತಿಯ ಫಲಾನುಭವಿಗಳನ್ನು ಗುರುತಿಸಿ ಯೋಜನೆಯಡಿ ಪರಿಗಣಿಸುವುದಾಗಿ ಸರ್ಕಾರ ಹೇಳಿತ್ತಾದರೂ ಈವರೆಗೆ ಆ ನಿಟ್ಟಿನಲ್ಲಿ ಯಾವುದೇ ಪ್ರಕ್ರಿಯೆ ನಡೆದಿಲ್ಲ. ಹೀಗಾಗಿ ಮಹಿಳೆಯರು ನಿತ್ಯ ಕಚೇರಿಗೆ ಅಲೆಯುತ್ತಿದ್ದಾರೆ. ತಾವು ಐಟಿ-ಜಿಎಸ್‌ಟಿ ಪಾವತಿದಾರರಲ್ಲವೆಂದು ಹೇಳಿದರೂ ಸ್ಪಂದನೆ ಸಿಗುತ್ತಿಲ್ಲ.



2023ರ ಆಗಸ್ಟ್ 30ರಂದು ಗೃಹಲಕ್ಷ್ಮಿ ಯೋಜನೆ ಜಾರಿಯಾಯಿತು. ಇದರ ನಿಯಮಾವಳಿ ಪ್ರಕಾರ, ಐಟಿ ಮತ್ತು ಜಿಎಸ್‌ಟಿ ಪಾವತಿದಾರರು ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯಲು ಅನರ್ಹರು. ಯೋಜನೆ ಜಾರಿಯಾದ ತಿಂಗಳು ಅರ್ಜಿ ಸಲ್ಲಿಸಿದ್ದ ಎಲ್ಲಾ ಮಹಿಳೆಯರಿಗೂ ಹಣ ತಲುಪಿತ್ತು. ನಂತರ ಅರ್ಹ ಫಲಾನುಭವಿಗಳಿಗೆ ಮಾತ್ರ ಯೋಜನೆಯ ಹಣ ಕೈಸೇರಬೇಕೆಂಬ ಉದ್ದೇಶದಿಂದ ಫಲಾನುಭವಿಗಳ ಪಟ್ಟಿ ಪರಿಷ್ಕರಣೆ ನಡೆಯಿತು. ಈ ವೇಳೆ ಐಟಿ ಮತ್ತು ಜಿಎಸ್‌ಟಿ ತೆರಿಗೆ ಪಾವತಿದಾರರನ್ನು ಪತ್ತೆ ಮಾಡಿ ಯೋಜನೆಯ ಹಣವನ್ನು ಅಕೌಂಟ್‌ಗೆ ಹಾಕುವುದನ್ನು ನಿಲ್ಲಿಸಲಾಯಿತು. ಈ ರೀತಿಯ ಪರಿಶೀಲನೆಯ ವೇಳೆ ಐಟಿ ಮತ್ತು ಜಿಎಸ್‌ಟಿ ತೆರಿಗೆ ಪಾವತಿದಾರರಲ್ಲದ ಮಹಿಳೆಯರು ಅನೇಕರಿದ್ದಾರೆ.

### ಗೃಹಲಕ್ಷ್ಮಿ ಯೋಜನೆ ಐಟಿ-ಜಿಎಸ್‌ಟಿ ಪಾವತಿದಾರರ ವಿವರ

| ತಾಲ್ಲೂಕು | ಸಂಖ್ಯೆ |
|---|---|
| ಹಾಸನ | 2737 |
| ಚನ್ನರಾಯಪಟ್ಟಣ | 825 |
| ಹೊಳೆನರಸೀಪುರ | 529 |
| ಬೇಲೂರು | 423 |
| ಸಕಲೇಶಪುರ | 568 |
| ಆಲೂರು | 155 |
| ಅರಸೀಕೆರೆ | 901 |
| ಅರಕಲಗೂಡು | 560 |
| ಒಟ್ಟು | 6698 |

**ಫಲಾನುಭವಿಗಳ ವಿವರ**

ಪ್ರತಿ ತಿಂಗಳು ನೀಡಲಾಗುವ 2 ಸಾವಿರ ರೂ. ಗೃಹಲಕ್ಷ್ಮಿ ಯೋಜನೆಗೆ ಜಿಲ್ಲಾದ್ಯಂತ 4,42,206 ಮಹಿಳೆಯರು ನೊಂದಣಿಯಾಗಿದ್ದು, 4,26,710 ಫಲಾನುಭವಿಗಳಿಗೆ ಹಣ ದೊರೆಯುತ್ತಿದೆ. ಹಾಸನ ತಾಲ್ಲೂಕಿನ 85,842, ಚನ್ನರಾಯಪಟ್ಟಣದ 71,677, ಹೊಳೆನರಸೀಪುರದ 44,067, ಬೇಲೂರು ತಾಲ್ಲೂಕಿನ 46,374, ಸಕಲೇಶಪುರದ 28,861, ಆಲೂರು ತಾಲ್ಲೂಕಿನ 22,533, ಅರಸೀಕೆರೆಯ 76,065, ಅರಕಲಗೂಡು ತಾಲ್ಲೂಕಿನಲ್ಲಿ 51,291 ಫಲಾನುಭವಿಗಳಿದ್ದಾರೆ.

**ಫಲಾನುಭವಿಗಳ ಗುರುತಿಸದ ಇಲಾಖೆ**

ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ತಕ್ಷಣ ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆಯ ಸೂಚನೆ ನೀಡಿದ್ದರು. ಮೃತರು, ಒಂದೇ ಖಾತೆಗೆ ಎರಡೆರಡು ಬಾರಿ ಹಣ ವರ್ಗಾವಣೆ, ಐಟಿ-ಜಿಎಸ್‌ಟಿ ಪಾವತಿದಾರರಲ್ಲದಿದ್ದರೂ ಯೋಜನೆಯಿಂದ ಹೊರಗುಳಿದವರನ್ನು ಗುರುತಿಸುವಂತೆ ಸರ್ಕಾರ ಸೂಚಿಸಿದ್ದರೂ ಈವರೆಗೆ ಆ ನಿಟ್ಟಿನಲ್ಲಿ ಪ್ರಗತಿ ಯಾಗಿಲ್ಲ. ಐಟಿ-ಜಿಎಸ್‌ಟಿಯಡಿ ಅರ್ಹರು ಸಿಲುಕಿಕೊಂಡಿದ್ದು, ಅಂತಹವರು ಎಷ್ಟು ಜನರಿದ್ದಾರೆಂಬ ಮಾಹಿತಿ ಇಲ್ಲ. ಈ ಕುರಿತ ಯಾವುದೇ ಪ್ರಶ್ನೆ ಕೇಳಿದರೂ ಸರ್ಕಾರವೇ ನೀಡಬೇಕೆಂದು ಹಾರಿಕೆಯ ಉತ್ತರ ನೀಡುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು.

**ಜನರಿಗೆ ದಾಖಲೆ ತೋರಿಸುವುದೇ ಕೆಲಸ**

ಒಂದೆಡೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ ನಡೆಯುತ್ತಿದೆ. ಮತ್ತೊಂದೆಡೆ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮನೆಗಳ ಬಳಿ ದಾಖಲೆಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ಇದರ ನಡುವೆ ಸಾಮಾಜಿಕ ಭದ್ರತೆ ಪಿಂಚಣಿ ಯೋಜನೆಯ ಫಲಾನುಭವಿಗಳ ಸರ್ವೆ ನಡೆಸಿ ಸಂಶಯಾಸ್ಪದ ಪ್ರಕರಣಗಳಲ್ಲಿ ಪಿಂಚಣಿ ನಿಲ್ಲಿಸಲಾಗಿದೆ. ಪಿಂಚಣಿ ಬೇಕಾಗಿರುವವರು ಸೂಕ್ತ ದಾಖಲೆಗಳನ್ನು ಸಲ್ಲಿಕೆ ಮಾಡಬೇಕಿದೆ. ಹೀಗಾಗಿ ಸಾರ್ವಜನಿಕರಿಗೆ ದಾಖಲೆ ತೋರಿಸುವುದೇ ತಲೆನೋವಿನ ಕೆಲಸವಾಗಿದೆ.

## ದೆಹಲಿಯಲ್ಲಿ ಸರಣಿ ಸಭೆ : ಸಂಪುಟ ವಿಸ್ತರಣೆ ಶೀಘ್ರ

• ಪ್ರಜೋದಯ ವರದಿ

**ನವದೆಹಲಿ:** ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮಂಗಳವಾರ ಬಿರುಸಿನ ಚಟುವಟಿಕೆಗಳು ನಡೆದಿವೆ. ನಿರೀಕ್ಷೆಯಂತೆ ಎಲ್ಲವೂ ನಡೆದರೆ ಬುಧವಾರ ನೂತನ ಸಚಿವರ ಹೆಸರು ಬಹಿರಂಗವಾಗಲಿದೆ.

ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬೆಂಗಳೂರಿನ ಲೋಕಭವನದಲ್ಲಿ ಸಿದ್ಧತೆಗಳು ಆರಂಭವಾಗಿವೆ. ಶಿಷ್ಟಾಚಾರ ವಿಭಾಗದ ಅಧಿಕಾರಿಗಳು ಲೋಕಭವನಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು ರಾಜ್ಯಪಾಲರ ಸಮಯ ಲಭ್ಯತೆ ಕುರಿತು ಸಮಾಲೋಚನೆ ನಡೆಸಿದ್ದಾರೆಂದು ತಿಳಿದು ಬಂದಿದೆ. ಡಿಪಿಎಆರ್ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದು ಸಿದ್ಧತೆಗೆ ಸೂಚಿಸಿದ್ದಾರೆ. ಬುಧವಾರ ರಾತ್ರಿ ಸಚಿವರ ಪಟ್ಟಿ ಪ್ರಕಟವಾಗಲಿದೆ ಎಂದು ಮೂಲಗಳು ತಿಳಿಸಿವೆ. ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸಹ ದೆಹಲಿಯಲ್ಲಿದ್ದು, ಸಚಿವ ಸ್ಥಾನ ಸಿಗುವ ವಿಶ್ವಾಸದಲ್ಲಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ದೆಹಲಿಯಲ್ಲಿದ್ದಾರೆ. ಇದೇ ಸಂದರ್ಭದಲ್ಲಿ ಹೈಕಮಾಂಡ್ ವರಿಷ್ಠರ ಜೊತೆಗೆ ಸರಣಿ ಸಭೆ ನಡೆಸಿದ್ದಾರೆ.

ಒಟ್ಟು 33 ಜನರ ಹೆಸರನ್ನು ಹೈಕಮಾಂಡ್ ಮುಂದೆ ಮೂವರು ನಾಯಕರು ಇಟ್ಟಿದ್ದಾರೆ. ಅದನ್ನು 20ಕ್ಕೆ ಇಳಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಮನೆಯಲ್ಲಿ ಸರಣಿ ಸಭೆ ನಡೆಸಲಾಯಿತು. ಮೊದಲು ಸಿದ್ದರಾಮಯ್ಯ ಅವರೊಂದಿಗೆ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಚರ್ಚೆ ನಡೆಸಿದರು. ಮಧ್ಯಾಹ್ನ 1.30ಕ್ಕೆ ಬಿ.ಕೆ.ಹರಿಪ್ರಸಾದ್, 2.30ಕ್ಕೆ ಡಿ.ಕೆ.ಶಿವಕುಮಾರ್ ಅವರ ಜೊತೆ ಚರ್ಚಿಸಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ರಾಜ್ಯದ ಮೂವರು ನಾಯಕರು ಮಾತುಕತೆ ನಡೆಸಿದ ಬಳಿಕ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

**ಭಾರತ ಸ್ವಾತಂತ್ರ್ಯ ಪಡೆದ ಬಳಿಕ ದೇಶದ ಇತಿಹಾಸದಲ್ಲಿ ನಿತ್ಯ ಹತ್ತು ಹಲವು ಹೋರಾಟಗಳು ನಡೆಯುತ್ತವೆ. ಆದರೆ ಕೆಲವೇ ಕೆಲವು ಹೋರಾಟಗಳು ಇಡೀ ದೇಶದ ಗಮನ ಸೆಳೆಯುತ್ತವೆ. ಅಂತಹ ಹೋರಾಟದ ಸಾಲಿಗೆ ಸದ್ಯ ದೆಹಲಿಯ ಜಂತರ್ ಮಂತರ್‌ನಲ್ಲಿ ಜಿರಳೆ ಪಕ್ಷ ನಡೆಸುತ್ತಿರುವ ಹೋರಾಟ ಹಾಗೂ ಸೋನಂ ವಾಂಗ್‌ಚುಕ್ ಅವರ ಸತ್ಯಾಗ್ರಹ ಸೇರಿದೆ.**

# ನೀಟಾಗಿ ನಡೆಯುತ್ತಿಲ್ಲವೇ ಜಿರಳೆ ಹೋರಾಟ?

ಹೋರಾಟದಿಂದಲೇ ದಾಸ್ಯಮುಕ್ತವಾದ ಭಾರತದಲ್ಲಿ ಪ್ರತಿಭಟಿಸುವ ಹಕ್ಕು ಪ್ರತಿಯೊಬ್ಬರಿಗೂ ಸಂವಿಧಾನವೇ ದಯಪಾಲಿಸಿದೆ. ಆದ್ದರಿಂದ ಯಾವುದೇ ಧರಣಿ, ಪ್ರತಿಭಟನೆ, ಸತ್ಯಾಗ್ರಹಗಳು ದೇಶದ ವ್ಯವಸ್ಥೆಗೆ ಹೊಸದೇನಲ್ಲ. ಆಯಾ ಕಾಲಕ್ಕೆ ಔಟ್ ಆಫ್ ದಿ ಸಿಲೆಬಸ್ ರೀತಿ ಬಂದು ಹೋರಾಟ, ಸರಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸಿರುವ ಅನೇಕ ಘಟನೆಗಳು ಭಾರತ ಇತಿಹಾಸದಲ್ಲಿ ನಡೆದಿದೆ. ರಾಷ್ಟ್ರ ರಾಜಧಾನಿ ದೆಹಲಿಯ ಜಂತರ್ ಮಂತರ್‌ನಲ್ಲಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಗಳಿರುವುದೇ ಈ ರೀತಿ ಪ್ರತಿಭಟನೆ ನಡೆಸಲು ಎನ್ನುವ ರೀತಿಯಾಗಿದೆ.

ಭಾರತ ಸ್ವಾತಂತ್ರ್ಯ ಪಡೆದ ಬಳಿಕ ದೇಶದ ಇತಿಹಾಸದಲ್ಲಿ ನಿತ್ಯ ಹತ್ತು ಹಲವು ಹೋರಾಟಗಳು ನಡೆಯುತ್ತವೆ. ಆದರೆ ಕೆಲವೇ ಕೆಲವು ಹೋರಾಟಗಳು ಇಡೀ ದೇಶದ ಗಮನ ಸೆಳೆಯುತ್ತವೆ. ಅಂತಹ ಹೋರಾಟದ ಸಾಲಿಗೆ ಸದ್ಯ ದೆಹಲಿಯ ಜಂತರ್ ಮಂತರ್‌ನಲ್ಲಿ ಜಿರಳೆ ಪಕ್ಷ ನಡೆಸುತ್ತಿರುವ ಹೋರಾಟ ಹಾಗೂ ಸೋನಂ ವಾಂಗ್‌ಚುಕ್ ಅವರ ಸತ್ಯಾಗ್ರಹ ಸೇರಿದೆ.

ರಾತ್ರೋರಾತ್ರಿ ದೇಶದ ಸಾಮಾಜಿಕ ಜಾಲತಾಣದಲ್ಲಿ ತಲ್ಲಣ ಸೃಷ್ಟಿಸಿದ್ದ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ), ಇದೀಗ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ವಿಷಯವನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿದೆ. ಆರಂಭದಲ್ಲಿ ಪೊಲೀಸರಿಂದ ಅನುಮತಿ ನಿರಾಕರಿಸಿ, ಬಳಿಕ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ಅವಕಾಶ ಸಿಕ್ಕಿತ್ತು. ಜಿರಳೆ ಪಕ್ಷ ಹೋರಾಟ ಆರಂಭಿಸಿ ಕೆಲದಿನಗಳ ಬಳಿಕ ಸೋನಂ ಆರಂಭಿಸಿದ ಉಪವಾಸ ಸತ್ಯಾಗ್ರಹದ ಬಳಿಕ ಈ ಪ್ರತಿಭಟನೆ ಇಡೀ ದೇಶದ ಗಮನ ಸೆಳೆಯಿತು. ಬಿಜೆಪಿ ವಿರೋಧಿ ಗುಂಪಿನವರೇ ಹೆಚ್ಚಾಗಿ ಈ ಹೋರಾಟಕ್ಕೆ ಬೆಂಬಲಿಸುತ್ತಿದ್ದಾರೆ ಎನ್ನುವ ಕೊಂಕಿನ ಹೊರತಾಗಿಯೂ ನೀಟ್ ಅಕ್ರಮದಿಂದ ಪ್ರಾಣ ಕಳೆದುಕೊಂಡ ಹತ್ತಾರು ವಿದ್ಯಾರ್ಥಿಗಳಿಗೆ, ಪ್ರತಿ ವರ್ಷ ಪೇಪರ್ ಲೀಕ್‌ನ ಆತಂಕದಲ್ಲಿಯೇ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಈ ಹೋರಾಟ ವನ್ನು ಬೆಂಬಲಿಸಿದ್ದರು.

ಸುಮಾರು 20 ದಿನಗಳ ಕಾಲ ಸೋನಂ ಉಪವಾಸ ಸತ್ಯಾಗ್ರಹ ನಡೆಸಿದರೂ, ಕೇಂದ್ರ ಸರಕಾರದ ಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಜಂತರ್ ಮಂತರ್ ನತ್ತ ಸುಳಿಯದೇ ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸಿದ್ದು ಸಹ ಹಲವರ ಆಕ್ರೋಶಕ್ಕೆ ಕಾರಣವಾಯಿತು. ಸತತ ಉಪವಾಸದಿಂದ ಸೋನಂ ಆರೋಗ್ಯ ಕೈಕೊಡಲು ಶುರುವಾಗುತ್ತಿದ್ದಂತೆ ಪೊಲೀಸರು ಬಲವಂತವಾಗಿ ಚಿಕಿತ್ಸೆ ಕೊಡಿಸಿದ್ದು, ಅದನ್ನು ಪ್ರಶ್ನಿಸಿ ಸೋನಂ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದು,

ಇತ್ತ ಜಿರಳೆ ಪಕ್ಷದವರು ಸರಕಾರದ ಈ ನಡೆಯನ್ನು ಖಂಡಿಸಿ ಗದ್ದಲ ಎಬ್ಬಿಸಿದರು. ಈ ಎಲ್ಲದರ ನಡುವೆ, ಸೋಮವಾರದಿಂದ ಮಳೆಗಾಲದ ಅಧಿವೇಶನ ಆರಂಭವಾಗಿರುವುದರಿಂದ ಜಿರಳೆ ಪಕ್ಷದ ಕಾರ್ಯಕರ್ತರು ಸಂಸತ್ ಮುತ್ತಿಗೆಗೆ ಮುಂದಾಗಿದ್ದರಿಂದ, ಪೊಲೀಸರು ಲಾಠಿ ಚಾರ್ಜ್ ಮಾಡಿ ಪ್ರತಿಭಟನಾ ನಿರತರನ್ನು ಚದುರಿಸುವ ಕಾರ್ಯ ಮಾಡಿದ್ದಾರೆ. ಪೊಲೀಸರ ನಡೆಗೆ ವಿರೋಧ, ಗದ್ದಲ ಗಲಾಟೆ ಶುರುವಾಗಿ ಆಡಳಿತ-ಪ್ರತಿಪಕ್ಷಗಳ ವಾಕ್ಸಮರ ಜೋರಾಗಿದೆ. ಆದರೆ ಪ್ರತಿಭಟನೆ ಆರಂಭ ವಾದ ಕಾರಣವನ್ನೇ ಎಲ್ಲರೂ ಮರೆತಂತಿದೆ.

ಸೋಷಿಯಲ್ ಮೀಡಿಯಾ ಮೂಲಕ ಸದ್ದು ಮಾಡಿದ್ದ ಜಿರಳೆ ಪಕ್ಷ ನೀಟ್ ವಿರುದ್ಧ ಹೋರಾಟವನ್ನು ಆರಂಭಿಸಿದ್ದರೂ, ಅದು ಕೊಂಚ ಗಂಭೀರತೆ ಪಡೆದುಕೊಂಡಿದ್ದು ಸೋನಂ ವಾಂಗ್‌ಚುಕ್ ಉಪವಾಸ ಸತ್ಯಾಗ್ರಹ ಕೂತ ಬಳಿಕವೇ. ಲಡಾಖ್ ಮೂಲದ ಸೋನಮ್ ಮೂಲತ ಎಂಜಿನಿಯರ್. ಲಡಾಖ್‌ನಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಿತಾಸಕ್ತಿಗಾಗಿ ತಮ್ಮ ಹೋರಾಟವನ್ನು ಆರಂಭಿಸಿದರು.

ಜಂತರ್ ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ಕೂತ ಸೋನಮ್, ನೀಟ್ ಪರೀಕ್ಷೆಯಲ್ಲಿ ಆಗಿರುವ ಅಕ್ರಮದ ನೈತಿಕ ಹೊಣೆ ಹೊತ್ತು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು, ಎರಡನೇಯದ್ದಾಗಿ ಪ್ರಶ್ನೆ ಪತ್ರಿಕೆ ಸೋರಿಕೆಯ ಕುರಿತಾಗಿ ಸಮಗ್ರ ನ್ಯಾಯಾಂಗ ಅಥವಾ ಸಂಸತ್ ಸದನ ಸಮಿತಿಯಿಂದ ಸಮಗ್ರ ತನಿಖೆ ನಡೆಸುವ ಭರವಸೆಯನ್ನು ಪ್ರಧಾನಿ ನರೇಂದ್ರ ಮೋದಿ ಅಥವಾ ಅಮಿತ್ ಶಾ ಬರೆದುಕೊಡಬೇಕು. ಅಂತಿಮವಾಗಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಳೆಗಾಲದ ಅಧಿವೇಶನದಲ್ಲಿ ಪ್ರತಿಪಕ್ಷ ನಾಯಕರು ಧ್ವನಿ ಎತ್ತುವುದಾಗಿ ಬರೆದುಕೊಡಬೇಕು ಎನ್ನುವುದಾಗಿತ್ತು.

ಪದೇಪದೆ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಗಮನಿಸಿದಾಗ ಸೋನಮ್ ಅವರ ಬೇಡಿಕೆಗಳು ಸರಿಯಾಗಿಯೇ ಇದೆ. ಈ ಹಿಂದೆ ಪ್ರಶ್ನೆಪತ್ರಿಕೆಗಳು ಸೋರಿಕೆಯಾದಾಗ ಹಲವು ರಾಜ್ಯಗಳಲ್ಲಿ ಅಂದಿನ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿರುವ ಉದಾಹರಣೆಗಳಿವೆ. ಪ್ರತಿಪಕ್ಷ ದಲ್ಲಿದ್ದಾಗ ಬಿಜೆಪಿ ನಾಯಕರೇ, ಸಚಿವರುಗಳ ರಾಜೀನಾಮೆ ನೀಡಬೇಕು ಎನ್ನುವ ಬೇಡಿಕೆಯಿಟ್ಟಿರುವ ಉದಾಹರಣೆಯಿದೆ. ಇನ್ನು ಮುಂದೆ ಹೀಗಾಗದಂತೆ ಕ್ರಮವಹಿಸುವ ಹಾಗೂ ಈಗಾಗಿರುವುದಕ್ಕೆ ಕಾರಣವೇನು ಎನ್ನುವ ಬಗ್ಗೆ ಸಮಗ್ರ ತನಿಖೆ ನಡೆಸುವ ವಿಷಯದಲ್ಲಿಯೂ ಬಿಜೆಪಿ ಸರಕಾರ ತೀರಾ ಪ್ರತಿಷ್ಠೆ ಇಟ್ಟುಕೊಳ್ಳಬಾರದು ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಆದರೆ ಸೋನಮ್ ಆರಂಭಿಸಿದ ಬಳಿಕ ಹೋರಾಟದ ಸುತ್ತ ಕಾಣಿಸಿಕೊಂಡ ಕೆಲವರಿಂದಾಗಿ ಇಡೀ ಹೋರಾಟದ ಮೂಲ ಆಶಯ ಮರೆಯುವಂತಾಯಿತು. ಸೋನಮ್‌ಗೆ ಬೆಂಬಲ ಸೂಚಿಸುವ ನೆಪದಲ್ಲಿ, ಸ್ಟಾಂಡ್‌ಅಪ್ ಕಾಮಿಡಿಯನ್ ಕುನಾಲ್ ಕರ್ಮಾ, ಸೀತೆಯ ಹೆಸರು ತೆಗೆದುಕೊಳ್ಳುವ ಸರಕಾರ, ನೀತಾ ಗಂಡನ ಕೆಲಸ ಮಾಡುತ್ತಿದೆ ಎನ್ನುವುದಿರಬಹುದು, ನೀಟ್ ಪರೀಕ್ಷಾ ಅಕ್ರಮದ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಹಿಂದೂ ವಿರೋಧಿ ಹೇಳಿಕೆಗಳು, ಈ ಹೇಳಿಕೆಗಳನ್ನೇ ದೊಡ್ಡ ಸುದ್ದಿಯನ್ನಾಗಿ ವಿದೇಶಿ ಮಾಧ್ಯಮಗಳು ತೋರಿಸುತ್ತಿರುವುದು ಇದೀಗ ವಿವಾದವಾಗಿದೆ.

ನೀಟ್ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಲು ಹೋರಾಡುತ್ತಿರುವ ಸೋನಂ ಪ್ರತಿಭಟನೆಗೆ ಎಸ್‌ಎಫ್‌ಐ, ಎಐಎಸ್‌ಎ ವಿದ್ಯಾರ್ಥಿ ಸಂಘಟನೆಗಳು, ಪ್ರಕಾಶ್ ರಾಜ್, ಅರುಂಧತಿ ರಾಯ್, ಅರವಿಂದ ಕೇಜ್ರಿವಾಲ್ ಸೇರಿದಂತೆ ಅನೇಕ ಬಿಜೆಪಿ ವಿರುದ್ಧ ನಿತ್ಯ ಟೀಕಿಸುವ ನಾಯಕರು ಭಾಗವಹಿಸಿ, ಅಸಂಬದ್ಧ ಹೇಳಿಕೆಗಳನ್ನು ನೀಡಿರುವುದು ಇಡೀ ಹೋರಾಟದ ಮೂಲವನ್ನೇ ಬಿಟ್ಟು ರಾಜಕೀಯ ವೇದಿಕೆಯಾಗಿ ಮಾರ್ಪಡಿಸಿದೆ. ಇದಕ್ಕೆ ಪೂರಕವಾಗಿ ಜಿರಳೆ ಪಕ್ಷದ ಅಭಿಜಿತ್ ದಿಪ್ಕೆ ಸೇರಿ ಹಲವು ನಾಯಕರು, ನೀಟ್ ಅಕ್ರಮದ ಅನ್ಯಾಯ ಬಿಟ್ಟು ಬೇರೆಲ್ಲ ಮಾತನಾಡುತ್ತಿರುವುದರಿಂದ ಕೇಂದ್ರ ಸರಕಾರದ ಲೋಪವನ್ನು ಹೈಲೈಟ್ ಆಗುವ ಬದಲು, ವೇದಿಕೆಯಲ್ಲಿ ಪ್ರಸ್ತಾಪಿಸಿರುವ ಅನಗತ್ಯ ವಿಷಯಗಳು ಮುನ್ನಲೆಗೆ ಬರುತ್ತಿದೆ ಎನ್ನುವುದು ವಾಸ್ತವ.

ನೀಟ್ ಪರೀಕ್ಷೆಯಲ್ಲಿನ ಎಡವಟ್ಟಿನ ವಿಷಯದಲ್ಲಿ ಸಿಜೆಪಿ ಆರಂಭಿಸಿದ ಆನ್‌ಲೈನ್ ಅಭಿಯಾನಗಳು, ಬೆಂಗಳೂರು ಸೇರಿದಂತೆ ವಿವಿಧ ನಗರಗಳಲ್ಲಿ ನಡೆಸಿದ ಧರಣಿಗಳಿರಲಿ ಹಾಗೂ ದೆಹಲಿಯ ಜಂತರ್ ಮಂತರ್‌ನಲ್ಲಿ ಆರಂಭಿಸಿದ ಪ್ರತಿಭಟನೆಯ ವಿಷಯ ತಪ್ಪು ಎನ್ನಲು ಸಾಧ್ಯವಿಲ್ಲ. ನೀಟ್ ಹೆಸರಲ್ಲಿ ಏನನ್ನು ಸಾಧಿಸಲು ಹೊರಟಿದ್ದಾರೆ? ಪ್ರತಿಭಟನೆಯಲ್ಲಿ ಸರಕಾರದ ಲೋಪ-ದೋಷ ಎತ್ತಿ ಹಿಡಿಯುವ ವಿಷಯವಿರಲಿ, ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೇಳುವುದಾಗಿ ತಪ್ಪಲ್ಲ. ಆದರೆ ನೀಟ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಖಂಡಿಸಿ ನಡೆಸುತ್ತಿರುವ ಹೋರಾಟದ ವೇದಿಕೆಯಲ್ಲಿ, ಕೆಲವರ ಮಾತು ಇಡೀ ಹೋರಾಟವನ್ನು ಪ್ರಶ್ನಿಸುವಂತಾಗಿದೆ.

ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕೆಂದು ನಡೆಯುತ್ತಿರುವ ಹೋರಾಟದ ವೇದಿಕೆಯಲ್ಲಿ ಹಿಂದೂ ದೇವರುಗಳಿಗೆ ಅಪಮಾನವಾಗುವಂತೆ ಮಾತನಾಡುವುದು, ಇಡೀ ಕೇಂದ್ರ ಸರಕಾರವನ್ನೇ ಅಪಮಾನಿಸುವಂತೆ ಮಾಡುವುದು ಹಲವು ರೀತಿಯ ಅನುಮಾನಗಳಿಗೆ ಕಾರಣವಾಗಿದೆ. ಇದೇ ಕಾರಣಕ್ಕೆ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಲು ಆರಂಭವಾಗಿರುವ ಈ ಹೋರಾಟ ರಾಜಕೀಯ ಅಜೆಂಡಾಗಳನ್ನು ಹೊರಹಾಕಲು ವೇದಿಕೆಯಾಗುತ್ತಿದೆ ಎನ್ನುವುದು ಸ್ಪಷ್ಟವಾಗುತ್ತಿದೆ.

ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಭಾರತದಲ್ಲಿ ಈ ರೀತಿಯ ಹೋರಾಟಗಳು ಇದೇ ಮೊದಲೇನಲ್ಲ. ಈ ಹಿಂದೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಲು ದಶಕಗಳ ಕಾಲ ಚಳವಳಿ ನಡೆದಿತ್ತು. ಇದಾದ ಬಳಿಕ 1974ರಲ್ಲಿ ಭ್ರಷ್ಟಾಚಾರ, ಆಡಳಿತ ವೈಫಲ್ಯದ ವಿರುದ್ಧ ಶುರುವಾಗಿ, ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದು ಜಯಪ್ರಕಾಶ್ ನಾರಾಯಣ ಚಳವಳಿ (ಜೆಪಿ ಚಳವಳಿ). ಜೆಪಿ ಚಳುವಳಿ ದೇಶದ ರಾಜಕೀಯ ಇತಿಹಾಸಕ್ಕೆ ಮಹತ್ವದ ತಿರುವು ನೀಡಿದ ಚಳವಳಿ ಎಂದರೆ ತಪ್ಪಾಗುವುದಿಲ್ಲ. ಈ ಚಳವಳಿಯಿಂದಲೇ ಜನತಾ ಪಕ್ಷದ ಉದಯವಾಗಿ, 1977ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲು ಕಂಡು, ಮೊದಲ ಬಾರಿಗೆ ದೇಶದಲ್ಲಿ ಕಾಂಗ್ರೆಸೇತರ ಪಕ್ಷ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯೂ ಆಗಿತ್ತು!



ಈ ಹೋರಾಟದ ಬಳಿಕ ಅಸ್ಸಾಂ ಚಳುವಳಿ, ಮಂಡಲ್ ಆಯೋಗ ವಿರೋಧಿ ಪ್ರತಿಭಟನೆಗಳು ನಡೆದರೂ, ಇಡೀ ದೇಶವನ್ನು ತನ್ನ ಕಡೆ ತಿರುಗುವಂತೆ ಮಾಡಿದ, ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಹೋರಾಟ. ಉಪವಾಸ ಸತ್ಯಾಗ್ರಹ ಆರಂಭಿಸಿ, ಲೋಕಪಾಲ ಬಿಲ್ ಜಾರಿಗೆ ಆಗ್ರಹಿಸಿದ್ದರು. ಈ ಹೋರಾಟದಲ್ಲಿ ಯಾವುದೇ ಪಕ್ಷದ ಬಲವಿಲ್ಲದಿದ್ದರೂ, ಭವಿಷ್ಯದಲ್ಲಿ ಈ ಚಳವಳಿಯ ಮೂಲಕ ಉಗಮವಾಗಿದ್ದೇ ಆಮ್ ಆದ್ಮಿ ಪಕ್ಷ.

ಎರಡು ಹಂತದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ ಅಣ್ಣಾ ಹಜಾರೆಯ ಅವರ ಹೋರಾಟದ ಫಲವಾಗಿ ದೇಶದಲ್ಲಿ ಲೋಕಪಾಲ ಬಿಲ್ ಮಂಡಿಸಿ, ಅಂಗೀಕರಿಸಲಾಯಿತು (ಈಗ ಲೋಕಪಾಲ್ ಎಷ್ಟು, ಏನು ಕೆಲಸ ಮಾಡುತ್ತಿದೆ ಎನ್ನುವುದು ಬೇರೆ ಮಾತು). ಇದರ ಮುಂದುವರಿದ ಭಾಗ ಎನ್ನುವಂತೆ 2013ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಯುಪಿಎ ಸರಕಾರ ಹೋಗಿ, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಭರ್ಜರಿ ಬಹುಮತದೊಂದಿಗೆ ಕೇಂದ್ರದ ಅಧಿಕಾರದ ಗದ್ದುಗೆ ಏರಿತ್ತು. ಇನ್ನೊಂದಡೆ ಅಣ್ಣಾ ಹಜಾರೆ ತೆರೆಮರೆಗೆ ಸರಿದರೂ, ಚಳವಳಿಯನ್ನು ಮುಂದಿಟ್ಟುಕೊಂಡು ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ಆಪ್ ಪಕ್ಷ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಅಧಿಕಾರಕ್ಕೆ ಬರುವುದಷ್ಟೇ ಅಲ್ಲದೇ, ದೇಶದ ವಿವಿಧ ರಾಜ್ಯಗಳಿಗೂ ತನ್ನ ಅಸ್ತಿತ್ವವನ್ನು ಸ್ಥಾಪಿಸಿತು.

ರಾಜಕೀಯ ಹೊರತಾಗಿ ನಿರ್ಭಯಾ ಹೋರಾಟ, ಕೇಂದ್ರ ಸರಕಾರದ ಕೃಷಿ ವಿಧೇಯಕದ ವಿರುದ್ಧ ರೈತರ ಪ್ರತಿಭಟನೆಗಳು ದೇಶದ ಗಮನ ಸೆಳೆದಿವೆ. ಈ ಹೋರಾಟಗಳ ಮಾದರಿಯಲ್ಲಿಯೇ ಜಿರಳೆ ಪಕ್ಷ ತನ್ನ ಹೋರಾಟ ನಡೆಸುವ ಆಲೋಚನೆಯಲ್ಲಿದೆ. ಕೃಷಿ ವಿಧೇಯಕ ವಿರುದ್ಧದ ರೈತರ ಹೋರಾಟದ ಹೊರತಾಗಿ ಉಳಿದ ಹೋರಾಟಗಳಲ್ಲಿ ನಿರ್ದಿಷ್ಟ ಗುರಿಯಿತ್ತು. ತಮ್ಮ ಬೇಡಿಕೆಯ ಆಚೆ ರಾಜಕೀಯ ಹೇಳಿಕೆಗಳು ಹೆಚ್ಚಾಗಿ ಕಾಣಿಸಿಕೊಳ್ಳಲಿಲ್ಲ.

ಆದರೆ ಸಿಜೆಪಿ ಜಂತರ್ ಮಂತರ್‌ನಲ್ಲಿ ಆರಂಭಿಸುವಾಗ ನೀಟ್‌ನಲ್ಲಿರುವ ಅಕ್ರಮಕ್ಕೆ ಸಂಬಂಧಿಸಿದ ಹೋರಾಟವೆಂದು ಆರಂಭಿಸಿ ಬಳಿಕ, ಸೀತೆಯ ವಿಷಯ ಪ್ರಸ್ತಾಪಿಸುವುದು, ವೈಯಕ್ತಿಕ ಟೀಕೆಗೆ ಇಳಿದಿರುವುದೇ ಈ ಹೋರಾಟ ನೈಜ ವಿಷಯಕ್ಕಿಂತ ಹೆಚ್ಚಾಗಿ, ಅನಗತ್ಯ ವಿಷಯಗಳಿಂದ ಸುದ್ದಿಯಾಗುತ್ತಿದೆ.

ವೈಯಕ್ತಿಕ ಹಿತಾಸಕ್ತಿ, ಲಾಭಗಳನ್ನು ಮೀರಿದ ಹೋರಾಟಗಳಿಗೆ ಮಾತ್ರ ಜನಮನ್ನಣೆ ಸಿಗುತ್ತದೆ. ಇನ್ನು ಜಿರಳೆ ಪಕ್ಷ ಆರಂಭಿಸಿರುವ ಈ ಹೋರಾಟದ ಹಿಂದೆ ರಾಜಕೀಯ ಅಜೆಂಡಾ, ವೈಯಕ್ತಿಕ ದ್ವೇಷವಿದೆ ಎನ್ನುವ ಕಾರಣಕ್ಕೆ ಹೋರಾಟದ ಮೂಲ ಆಶಯವಾಗಿರುವ ನೀಟ್ ವಿದ್ಯಾರ್ಥಿಗಳಿಗೆ ಹಿತಾಸಕ್ತಿಯ ರಕ್ಷಣೆಯ ವಿಷಯವನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಈ ಹಿಂದೆ ದೇಶದಲ್ಲಿ ಹೋರಾಟಗಳು ನಡೆದಾಗ ಅವುಗಳನ್ನು ಗಂಭೀರವಾಗಿ ಪರಿಗಣಿಸದೇ ಕುತ್ತಿಗೆಗೆ ಬರುವ ತನಕ ಬಿಟ್ಟುಕೊಂಡ ರಾಜಕೀಯ ಪಕ್ಷಗಳ ಕಥೆಯೇನಾಗಿದೆ? ಹಾಗೂ ಆ ಸರಕಾರಗಳ ನಿರ್ಲಕ್ಷ್ಯದಿಂದಾಗಿ ರಾಜಕೀಯದಲ್ಲಾದ ಬದಲಾವಣೆಯಿಂದ ಆಗಿರುವ ಲಾಭ-ನಷ್ಟಗಳ ಬಗ್ಗೆ ಬಿಜೆಪಿಗೆ ಬಿಡಿಸಿ ಹೇಳಬೇಕಿಲ್ಲ!

**- ರಂಜಿತ್ ಎಚ್** ಅಶ್ವತ್ಥ್



## ನಮ್ಮನ್ನು ಶ್ರೀಮಂತ ಮಾಡುವ ಭಾವ ಹೇಗೆ?



ಈ ಕಥೆ ಓದಿ. ಒಬ್ಬ ಅಗರ್ಭ ಶ್ರೀಮಂತನಿದ್ದನು. ಆಗಿನ ಕಾಲದಲ್ಲಿ ಆತ ಸಂಪತ್ತನ್ನು ಬಂಗಾರದ ನಾಣ್ಯಕ್ಕೆ ಮಾರ್ಪಡಿಸಿ, ಅದನ್ನು ನೆಲದಲ್ಲಿ ಹೂತುಹಾಕಲು ತೀರ್ಮಾನಿಸಿದನು. ಅದರಂತೆ ನಾಣ್ಯಗಳನ್ನು ಗಳಿಸಿದನು. ಇದನ್ನು ಮನೆಯಲ್ಲಿ ಗುಂಡಿ ತೆಗೆದು ಹೂತು ಹಾಕಿದರೆ ಎಲ್ಲರಿಗೂ ಗೊತ್ತಾಗುತ್ತದೆ. ನಂತರ ಅದನ್ನು ಯಾರಾದರೂ ಗೊತ್ತಾಗದಂತೆ ಮೋಸ ಮಾಡಿದರೆ ಏನು ಮಾಡುವುದು? ಎಂದು ಯೋಚಿಸಿದ. ಕಡೆಗೆ ಆತನಿಗೆ ಒಂದು ಉಪಾಯ ಹೊಳೆಯಿತು. ಮಧ್ಯರಾತ್ರಿ ಜಮೀನಿಗೆ ಹೋಗುವುದು. ಎಲ್ಲಿ ವ್ಯವಸಾಯ ಮಾಡದೆ ಗಿಡಗಳು ಬೆಳೆದಿವೆಯೋ, ಅಲ್ಲಿ ಗುಂಡಿ ತೆಗೆದು ಹೂತು ಹಾಕುವುದು ಎಂದು ತೀರ್ಮಾನಿಸಿದನು. ಒಂದು ದಿನ ಮಧ್ಯರಾತ್ರಿ ಶ್ರೀಮಂತ ಗುದ್ದಲಿ, ಹಾರೆ ತೆಗೆದುಕೊಂಡು ಹೊರಟನು. ಸುತ್ತ ಮುತ್ತ ನೋಡಿದ ಗಾಢವಾದ ಕತ್ತಲೆ ಯಾರು ಇಲ್ಲ ಎಂದು ಭಾವಿಸಿ ಜಮೀನಿನ ಬಳಿ ಹೊರಟನು. ಆತನ ಮನೆಯ ಆಳು, ಈತನ ನಡೆಯನ್ನು ಗಮನಿಸಿ ಆತನಿಗೆ ಗೊತ್ತಾಗದಂತೆ ಆತನನ್ನು ಹಿಂಬಾಲಿಸುತ್ತಾನೆ. ಮತ್ತೆ ಆತ ಏನು ಮಾಡುತ್ತಿದ್ದಾನೆ ಅನ್ನುವುದನ್ನು ದೂರದಿಂದ ಆತನಿಗೆ ಗೊತ್ತಾಗದಂತೆ ಗಮನಿಸುತ್ತಿದ್ದನು. ಶ್ರೀಮಂತ ಬಂಗಾರದ ನಾಣ್ಯಗಳನ್ನು ಪೆಟ್ಟಿಗೆಯಲ್ಲಿ ಹಾಕಿ, ಗುಂಡಿಯೊಳಗೆ ಹಾಕಿ ಮಣ್ಣು ಮುಚ್ಚಿ ಅದರ ಮೇಲೆ ಗಿಡಗಳನ್ನು ಹಿಂದಿನಂತೆ ನೆಟ್ಟನು. ಸುತ್ತ ಮುತ್ತ ನೋಡಿದ ಯಾರೂ ನೋಡುತ್ತಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು ಮನೆಗೆ ವಾಪಸ್ ಆದನು. ಆತ ಅಂದ ನನ್ನಷ್ಟು ಶ್ರೀಮಂತ ಈ ಊರಿನಲ್ಲಿ ಯಾರು ಇಲ್ಲ ಅಂದನು.

ವಾರಕ್ಕೊಮ್ಮೆ ಅಲ್ಲಿ ಹೋಗುವುದು, ಕೂರುವುದು ನನ್ನಷ್ಟು ಶ್ರೀಮಂತ ಯಾರು ಇಲ್ಲ ಅಂದುಕೊಂಡು ಬರುತ್ತಿದ್ದನು. ಆರು ತಿಂಗಳಿಗೊಮ್ಮೆ ವರ್ಷಕ್ಕೊಮ್ಮೆ ಗುಂಡಿ ಮಣ್ಣು ತೆಗೆದು, ಪೆಟ್ಟಿಗೆ ಎತ್ತಿ ನೋಡುತ್ತಿದ್ದನು. ತೂಕ ಸರಿಯಾಗಿ ಇದ್ದಿದ್ದರಿಂದ ಆತನಿಗೆ ನಾಣ್ಯ ಪೆಟ್ಟಿಗೆಯಲ್ಲಿ ಸರಿಯಾಗಿದೆ ಎಂದುಕೊಂಡು ಬರುತ್ತಿದ್ದನು. ಹೀಗೆ ಸುಮಾರು 40, 50 ವರ್ಷಗಳು ಆದವು. ಒಂದು ದಿನ ತೀರ್ಮಾನಿಸಿದ. ಈ ದಿನ ಮಧ್ಯರಾತ್ರಿ ಹೋಗಿ, ಪೆಟ್ಟಿಗೆ ತೆಗೆದು, ನಾಣ್ಯ ಪರಿಶೀಲಿಸಬೇಕೆಂದು ತೀರ್ಮಾನಿಸಿ, ಮಧ್ಯರಾತ್ರಿ ಲಾಟಿನನ್ನು ತೆಗೆದುಕೊಂಡು, ಗುದ್ದಲಿ ಹಾರೆ ಹಾಕಿಕೊಂಡು ಹೊರಟನು. ಸುತ್ತಮುತ್ತ ಯಾರೂ ಇಲ್ಲದೆ ಇರೋದನ್ನು ಖಾತ್ರಿ ಮಾಡಿಕೊಂಡು ಜಮೀನಿನ ಬಳಿ ಹೋಗಿ ಗುದ್ದಲಿ, ಹಾರೆ ಸಹಾಯದಿಂದ ಗುಂಡಿ ತೆಗೆದು ಪೆಟ್ಟಿಗೆ ಹೊರ ತೆಗೆದು ಪೆಟ್ಟಿಗೆ ತೆರೆದನು. ಗಾಬರಿಯಾಗಿತ್ತು. ಅಲ್ಲಿ ನಾಣ್ಯಗಳು ಇರಲಿಲ್ಲ. ನಾಣ್ಯದ ತೂಕದಷ್ಟು ಕಲ್ಲುಗಳು ಇದ್ದವು. ಗಾಬರಿಯಿಂದ ಎದ್ದು ಸುತ್ತಮುತ್ತ ನೋಡಿದ. ಆ ಸಮಯಕ್ಕೆ ಮನೆಯ ಆಳು ಅಲ್ಲಿ ಪ್ರತ್ಯಕ್ಷ ಆದನು. ಕೇಳಿದ ಯಜಮಾನರೇ ಏನು ಮಾಡುತ್ತಿದ್ದೀರಿ? ಎಂದನು. ಆಗ ನಡೆದ ಘಟನೆಯನ್ನು ಶ್ರೀಮಂತ ಹೇಳಿ ಈಗ ನಾನು ಬಡವನಾದೆ ಎಂದು ಗೋಳಾಡಿದ. ಆಗ ಆ ಸೇವಕ ಹೇಳಿದ. ಆ ಚಿನ್ನದ ನಾಣ್ಯವನ್ನು ನಾನೇ ತೆಗೆದುಕೊಂಡು ಊರಿನ ಉಪಯೋಗಕ್ಕೆ ಬಳಸಿದೆ. ನೀನು ಹೂತು ಹಾಕಿದ ದಿನದಂದೇ ಅದನ್ನು ನಾನು ತೆಗೆದಿದ್ದು. ಅಷ್ಟೇ ತೂಕದ ಚಿನ್ನದ ನಾಣ್ಯಕ್ಕೆ ಬದಲಾಗಿ ಕಲ್ಲು ಹಾಕಿ, ಮತ್ತೆ ತಾವು ಮುಚ್ಚಿದಂತೆ ಮುಚ್ಚಿ, ಗಿಡ ನೆಟ್ಟಿದ್ದೆ ಎಂದನು. ನಿಮ್ಮ ನಡೆಯಲ್ಲಿ ವ್ಯತ್ಯಾಸ ಬಂದಿದ್ದರಿಂದ ನಿಮ್ಮ ಚಲನವಲನ ಗಮನಿಸುತ್ತಿದ್ದೆನು. ನಿಮ್ಮನ್ನು, ನಿಮಗೆ ಕಾಣದಂತೆ ಹಿಂಬಾಲಿಸುತ್ತಿದ್ದೆ ಎಂದನು. ಈ ಹಣ ದುರುಪಯೋಗ ಆಗಿಲ್ಲ. ಬಳಕೆಯಾಗಿ ಊರು ಶ್ರೀಮಂತವಾಗಿದೆ. ಊರು ಶ್ರೀಮಂತವಾದುದ್ದು ನಿಮ್ಮ ಹಣದಿಂದಲೇ ಎಂದನು. ಊರೇನೋ ಶ್ರೀಮಂತವಾಗಿದೆ, ನಾನು ಬಡವನಾದೆ ಎಂದು ದುಃಖಿಸಿದ.

ಈ ಕಥೆಯನ್ನು ಸರಿಯಾಗಿ ಗಮನಿಸಿ. ಶ್ರೀಮಂತ ದೊಡ್ಡ ಶ್ರೀಮಂತನಾಗಬೇಕೆಂದು ತೀರ್ಮಾನಿಸಿ, ಚಿನ್ನದ ನಾಣ್ಯ ಯಾರಿಗೂ ಗೋಚರಿಸದಂತೆ ಜಮೀನಿನಲ್ಲಿ, ಪೆಟ್ಟಿಗೆಯಲ್ಲಿ ತುಂಬಿ ಹೂತು ಹಾಕಿದ್ದನು. ಅಂದು ಹೇಳಿದ ನನ್ನಷ್ಟು ಶ್ರೀಮಂತರು ಯಾರಿಲ್ಲ ಎಂದು. ಸಂಪತ್ತು ನನ್ನ ಭೂಮಿಯಲ್ಲಿ ಸುಭದ್ರವಾಗಿದೆ ಎನ್ನುವ ಭಾವ ಮನಸ್ಸನ್ನು ತುಂಬಿತ್ತು. ಮನಸ್ಸು ತುಂಬಿದ ಬಾವದಿಂದಲೇ ಈತ ಶ್ರೀಮಂತನಾಗಿದ್ದನು. ವಾರಕ್ಕೊಮ್ಮೆ ಹೋಗಿ ಗಿಡ ಜಾಗ ನೋಡಿ ಮನಸ್ಸಿಗೆ ಹೇಳಿಕೊಳ್ಳುತ್ತಿದ್ದನು ನಾನು ಶ್ರೀಮಂತ ಅಂತ. ಹಾಗಾಗಿ ಆತ ಶ್ರೀಮಂತನೆ ಆಗಿದ್ದನು. ಆದರೆ ಹೂತು ಹಾಕಿದ ದಿನವೇ ಪೆಟ್ಟಿಗೆಯಲ್ಲಿದ್ದ ಚಿನ್ನ ತೆಗೆದು, ಕಲ್ಲು ಹಾಕಲಾಗಿತ್ತು. ಭೂಮಿಯಲ್ಲಿ ಸಂಪತ್ತು ಇರಲಿಲ್ಲ ಆದರೆ ಆತನ ಮನಸ್ಸಿನಲ್ಲಿ ಮಾತ್ರ ಸಂಪತ್ತಿನ ಭಾವ ತುಂಬಿತ್ತು. ಹಾಗಾಗಿ ಆತ ಶ್ರೀಮಂತನೇ ಆಗಿದ್ದನು. ಆರು ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆ ತೂಕ ನೋಡುತ್ತಿದ್ದನು. ತೂಕ ಸರಿಯಾಗಿತ್ತು. ಆಗಲೂ ಆತನ ಮನಸ್ಸಿನಲ್ಲಿ ಶ್ರೀಮಂತಿಕೆ ಭಾವ ತುಂಬಿತ್ತು. ಆದರೆ 40-50 ವರ್ಷದ ನಂತರ ತೆಗೆದು ನೋಡಿದಾಗ ಚಿನ್ನ ಇರಲಿಲ್ಲ, ಕಲ್ಲು ಕಂಡುಬಂದಿತ್ತು. ಆ ದಿನ ಬಡವ ಎಂದು ದುಃಖಿತನಾಗಿದ್ದ. ಪೆಟ್ಟಿಗೆ ತೆಗೆದಾಗ ಕಲ್ಲು ನೋಡಿ ಮನಸ್ಸನ್ನು ತುಂಬಿದ್ದ ಶ್ರೀಮಂತಿಕೆಯ ಭಾವ ಖಾಲಿಯಾಗಿತ್ತು. ಮನಸ್ಸಿನಲ್ಲಿ ಶ್ರೀಮಂತಿಕೆಯ ಭಾವ ಯಾವತ್ತು ಖಾಲಿಯಾಯಿತು ಅಂದಿನಿಂದ ಬಡವನಾಗಿದ್ದನು.

ಈಗ ಹೇಳಿ ಶ್ರೀಮಂತನನ್ನು ಶ್ರೀಮಂತ ಮಾಡಿದ್ದು ಭೂಮಿಯಲ್ಲಿದ್ದ ಸಂಪತ್ತೋ ಅಥವಾ ಮನಸ್ಸನ್ನು ತುಂಬಿದ ಭಾವವೋ?. ಭೂಮಿಯಲ್ಲಿದ್ದ ಸಂಪತ್ತಲ್ಲ ಏಕೆಂದರೆ ಅದೇ ದಿನ ಆ ಪೆಟ್ಟಿಗೆಯೊಳಗೆ ಕಲ್ಲು ಹಾಕಲಾಗಿತ್ತು. ಆತ 40-50 ವರ್ಷ ಶ್ರೀಮಂತನಾಗಿದ್ದ. ಅದು ಆತನ ಮನಸ್ಸು ತುಂಬಿದ ಭಾವದಿಂದ. ಹೇಳಿ ನಮ್ಮನ್ನು ಶ್ರೀಮಂತ ಮಾಡಿದ್ದು ಸಂಪತ್ತಲ್ಲ ಮನಸ್ಸನ್ನು ತುಂಬಿದ ಭಾವ. ಭಾವನೆ ನಮ್ಮನ್ನು ಶ್ರೀಮಂತ ಮಾಡುತ್ತದೆ. ಅಲ್ಲವೇ?

**- ಎಂ.ಪಿ. ಜ್ಞಾನೇಶ್,** ಮಂಗಳೂರು.

## ಭಯ

ಕೋಣೆಯನ್ನ ಕತ್ತಲಾಗಿಸಿಕೊಂಡು ಅತ ಕುಳಿತಿದ್ದಾನೆ. ಆ ಕೊನೆಗೆ ಬೆಳಕು ಬರೋದಿಲ್ಲ ಅಂತಲ್ಲ ಆದರೆ ಆ ಕೋಣೆ ಬೆಳಕು ಅವನನ್ನ ಭಯಪಡಿಸುತ್ತಿದೆ. ದೂರದ ಶಹರಿನಲ್ಲಿ ಬದುಕು ಕಟ್ಟಿಕೊಂಡ ಪುಟ್ಟ ಮನೆ ಅದು. ತಿಂಗಳಿಗೊಂದು ಸಲವೋ ಆರು ತಿಂಗಳಿಗೊಂದು ಸಲವೂ ಸಮಯ ಸಿಕ್ಕಾಗ ಮನೆ ಕಡೆಗೆ ಚಲಿಸುವವ. ಇತ್ತೀಚಿಗೆ ಮನೆಗೆ ಹೋಗಿ ಬಂದಾಗ ಮನೆ ತುಂಬಾ ಓಡಾಡ್ತಾ ಕೆಲಸಗಳನ್ನ ಮಾಡ್ತಾ ಇದ್ದ ಅಮ್ಮ ಆಗಾಗ ಕುಳಿತು ವಿಶ್ರಾಂತಿ ಪಡೆಯುವುದು ಕಾಡ್ತಾ ಇದೆ, ಅಪ್ಪನ ಮುಖದಲ್ಲಿ ಒಂದಷ್ಟು ನೆರಿಗೆಗಳು ಮೂಡಿ ಆಸ್ಪತ್ರೆ ಕಡೆಗೆ ಒಂದೆರಡು ಸಲ ಭೇಟಿ ಮಾಡಿದಿದೆ, ಬಣ್ಣದಿಂದ ತುಂಬಿದ್ದ ಗೋಡೆಗಳು ಬಿರುಕು ಬಿಡುತ್ತಿದೆ, ರಾತ್ರಿ ಹೊತ್ತಲ್ಲಿ ನಿದ್ದೆ ಇಲ್ಲದ ಅಪ್ಪ ಅಮ್ಮ ಚಡಪಡಿಸುವುದು ಕಾಡ್ತಾ ಇದೆ, ಇನ್ನೂ ಕೆಲಸ ಮಾಡೋದಕ್ಕೆ ಆಗದೇ ಇರುವ ಅಪ್ಪ ಅಮ್ಮನನ್ನ ನೆನೆಸಿಕೊಂಡರೆ ಭಯವಾಗ್ತಾ ಇದೆ. ಕೈ ಹಿಡಿದು ನಡೆಸಬೇಕಾದ ನಾನು ದೂರದ ಶಹರಿನಲ್ಲಿ ಸಣ್ಣ ಮೊತ್ತಕ್ಕಾಗಿ ರಾತ್ರಿ ಹಗಲೆನ್ನದೆ ದುಡಿದು ನನ್ನ ಬದುಕನ್ನೇ ದೂಡುವುದಕ್ಕೆ ಕಷ್ಟ ಪಡುವ ಸ್ಥಿತಿ ನಿರ್ಮಾಣವಾಗಿರುವುದಕ್ಕೆ ಬೇಸರವಿದೆ, ನಾನವರನ್ನು ಹೇಗೆ ನೋಡಿಕೊಳ್ಳುವೆ ಅನ್ನುವ ಭಯವಿದೆ, ಅವರ ಕನಸುಗಳು ಇನ್ನೂ ನನಸಾಗದಿರುವ ಕಾಲದಲ್ಲಿ ನಾನು ಕನಸು ಕಾಣುವುದು ಹೇಗೆ ಅನ್ನುವ ಯೋಚನೆಕಾಡುತ್ತಿದೆ. ಹಾಗಾಗಿ ಹೊರಗೆ ಬೆಳಕಿದ್ದರೂ ಒಳಗೆ ಕತ್ತಲಲ್ಲಿ ಕುಳಿತು ಬೆಳಕನ್ನು ಹುಡುಕುವ ಪ್ರಯತ್ನವಾಗಿದೆ. ಎದ್ದು ನಿಂತು ಕೋಣೆಯ ಕಿಟಕಿ ತೆರೆಯಲು ಭಯವಾಗುತ್ತಿದೆ. ತಾನೇ ತನ್ನ ಬೆಳಕನ್ನ ಹುಡುಕಿಕೊಳ್ಳಬೇಕೋ ಅಥವಾ ಬೇರೆ ಯಾರಾದರೂ ಬಂದು ಬೆಳಕು ಕೊಡುತ್ತಾರೋ ಅನ್ನುವ ಯೋಚನೆಯಲ್ಲಿದ್ದಾನೆ.



**- ಧೀರಜ್** ಬೆಳ್ಳಾರೆ

## ನೀಟ್ ಹಗರಣ, ಸರ್ಕಾರಕ್ಕೆ ನುಂಗಲಾರದ ತುತ್ತು.

ಬಹಳ ಖೇದಕರ ಸಂಗತಿಯೆಂದರೆ, ಇತ್ತೀಚಿನ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ 22 ಲಕ್ಷ ಜನ ವಿದ್ಯಾರ್ಥಿಗಳಿಗೆ ಅತೀವ ತೊಂದರೆಯಾಯ್ತು. ಮಾತ್ರವಲ್ಲ, ಆಘಾತವನ್ನು ತಾಳಲಾರದೆ, 20 ವಿದ್ಯಾರ್ಥಿಗಳು ಆತ್ಮಹತ್ಯೆಯಿಂದ ಸಾವನ್ನಪ್ಪಿದರು. ಈ ಆಘಾತಗಳಿಗೆ ಹೊಣೆಹೊತ್ತು, ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನರು ರಾಜೀನಾಮೆ ಕೊಡಬೇಕೆಂದು, ವಿಜ್ಞಾನಿ ಮತ್ತು ಪರಿಸರವಾದಿ ಸೋನಮ್ ವಾಂಗ್ಚುಕ್ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್ ನಲ್ಲಿ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಅವರ ಉಪವಾಸ ಮುಷ್ಕರವು 19 ನೇ ದಿನಗಳನ್ನು ತಲುಪುವಾಗ, ಸೋನಮ್ ವಾಂಗ್ ಚುಕ್ ರ ಆರೋಗ್ಯ ಬಿಗಡಾಯಿಸಿತು. ಆದರೆ ಸರಕಾರ ಕ್ಯಾರೇ ಎನ್ನಲಿಲ್ಲ. ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ, ದೆಹಲಿ ಹೈಕೋರ್ಟ್ ಸೋನಮ ಅವರ ಆರೋಗ್ಯದ ಬಗ್ಗೆ ಗಮನ ಕೊಡಬೇಕೆಂದು, ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಆದೇಶ ನೀಡಿತು. ಇದರ ಫಲವಾಗಿ ದೆಹಲಿ ಪೋಲೀಸರು ಅವರನ್ನು ಮುಷ್ಕರ ಸ್ಥಳದಿಂದ ಬಲವಂತವಾಗಿ ಆಸ್ಪತ್ರೆಗೆ ದಾಖಲಿಸಿದರು. ಸತ್ಯಾಗ್ರಹದ ಮುಂದಿನ ನಡೆಯಾಗಿದ್ದ ಪಾರ್ಲಿಮೆಂಟ್ ಚಲೋ ಅಭಿಯಾನ ಇಂದಿತ್ತು. ದೇಶದ ಹಲವಾರು ಪ್ರದೇಶಗಳಿಂದ ಯುವಕರು, ಯುವತಿಯರು ದೆಹಲಿಯಲ್ಲಿ ಜಮಾವಣೆಯಾದರು. ಶಾಂತಿಯುತ ಮೆರವಣಿಗೆ ನಡೆದಿತ್ತು. ಆದರೆ ದೆಹಲಿ ಪೋಲಿಸರು ಹಲವು ಸತ್ಯಾಗ್ರಹಿಗಳ ಮೇಲೆ ಲಾಠಿ ಚಾರ್ಜು ಮಾಡಿದರು. ಪೋಲಿಸರು ಸತ್ಯಾಗ್ರಹಿಗಳಿಗೆ ಮನಸೇಚ್ಛೆ ಲಾಠಿಯಿಂದ ಹೊಡೆದಿದ್ದಾರೆ. ಹಲವರಿಗೆ ಗಾಯವಾಯಿತು. ಸರಕಾರ 5-6 ಸ್ಟೇಷನ್‌ನಲ್ಲಿ ಮೆಟ್ರೋ ನಿಲುಗಡೆ ಮಾಡಿತು. ಅಂತರಜಾಲ ಸಂಪರ್ಕವನ್ನು ಕಡಿತಗೊಳಿಸಿದರು. ಒಟ್ಟಾರೆ ಈ ಹಿಂಸೆಗೆ ಸರ್ಕಾರವೇ ನಾಂದಿ ಹಾಡಿದಂತಾಗಲಿಲ್ಲವೇ?

ವಿದ್ಯಾರ್ಥಿಗಳ ನ್ಯಾಯಯುತವಾದ ಬೇಡಿಕೆಗೆ, ಸರ್ಕಾರದ ಉತ್ತರ ಮೌನವ್ರತ. ಈ ಬಗ್ಗೆ ಹಲವು ಪ್ರಶ್ನೆಗಳೇಳುತ್ತವೆ. ಸರ್ಕಾರವು ಉಪವಾಸ ಸತ್ಯಾಗ್ರಹಿ ಸೋನಮ್ ವಾಂಗಚುಕ್‌ರನ್ನು ಮಾತುಕತೆಗೆ ಏಕೆ ಆಹ್ವಾನಿಸಲಿಲ್ಲ? ಸರಕಾರಕ್ಕೆ ಪ್ರಶ್ನೆ ಪತ್ರಿಕೆ ಸೋರಿಕೆಯು ಗಂಭೀರವಾದ ವಿಷಯವಲ್ಲವೇ? ಅಥವಾ ಸರಕಾರ ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಪಟ್ಟವರನ್ನು ರಕ್ಷಿಸುತ್ತಿದೆಯಾ? ಸರಕಾರಕ್ಕೆ 20 ವಿದ್ಯಾರ್ಥಿಗಳ ಸಾವು ಸಾವಲ್ಲವೇ?

ಸಾಮಾನ್ಯವಾಗಿ, ಯಾವುದೇ ಸರಕಾರಿ ಸಂಸ್ಥೆಗಳಲ್ಲಿ ಯಾವುದೇ ಅಕ್ರಮವಾದಾಗ, ಅಲ್ಲಿಯ ಅಧಿಕಾರಿಗಳನ್ನು ಅಮಾನತ್‌ನಲ್ಲಿಡುತ್ತಾರೆ ಅಥವಾ ವರ್ಗಾಯಿಸುತ್ತಾರೆ. ಹಾಗಿರುವಾಗ 22 ಲಕ್ಷ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಚೆಲ್ಲಾಟ ನಡೆದಾಗ, 20 ಜನರ ಸಾವಾದಾಗ, ಶಿಕ್ಷಣ ಸಚಿವರನ್ನ ಬದಲಾಯಿಸಬೇಕಿತ್ತು. ಅಥವಾ ಸತ್ಯಾಗ್ರಹಿಗಳ ಜೊತೆ ಮಾತುಕತೆ ನಡೆಸಬಹುದಿತ್ತು. ಸರಕಾರದ ದಿವ್ಯ ನಿರ್ಲಕ್ಷ್ಯ.

ಈ ವಿಷಯವನ್ನು ಸರ್ಕಾರವು ಸ್ವಪ್ರತಿಷ್ಠೆಯನ್ನಾಗಿ ಪರಿಗಣಿಸಿದೆಯೇ? ಸರ್ಕಾರ ಚುನಾಯಿತರಾಗಿರುವುದು ಜನರಿಂದ, ಜನರಿಗಾಗಿಯೇ. ಹಾಗಿರುವಾಗ ಸರ್ಕಾರವು ನೊಂದವರೊಂದಿಗೆ ಮಾತುಕತೆ ನಡೆಯಿಸುವುದು ಸರ್ಕಾರದ ಕರ್ತವ್ಯವಲ್ಲವೇ ಅಥವಾ ಸ್ವಪ್ರತಿಷ್ಠೆಯ ಪ್ರದರ್ಶನವೇ ಮುಖ್ಯವೇ?

ಅಥವಾ ಸತ್ಯಾಗ್ರಹಿಗಳ ಒಗ್ಗಟ್ಟು, ಶಾಂತಿಯುತವಾದ, ಅಹಿಂಸಾ ಮಾರ್ಗವು, ಸರ್ಕಾರದಲ್ಲಿ ಅವ್ಯಕ್ತವಾದ ಭಯವನ್ನು ಹುಟ್ಟುಹಾಕಿದೆಯಾ?

ಸತ್ಯಾಗ್ರಹದ ಆರಂಭದಲ್ಲೇ, ಒಮ್ಮೆ ಸೋನಮ್ ವಾಂಗಚುಕ್ ರ ಮಾತುಕತೆ ನಡೆಸಿದ್ದರೆ, ಇಂದಿನ ಹಿಂಸೆಯನ್ನು ತಡೆಯಬಹುದಿತ್ತು. ಕಡೆಯ ಪ್ರಶ್ನೆ, ಬಹುಮತವಿರುವ ಸರಕಾರವು ತನ್ನ ಶೌರ್ಯವನ್ನು ತೋರಿಸಿತಾ ಅಥವಾ ತನ್ನ ದೌರ್ಬಲ್ಯವನ್ನು ಪ್ರದರ್ಶಿಸಿತಾ?

**- ಪ್ರಕಾಶ ಎನ್.** ಮಂಗಳೂರು




ಕೆಲವು ವರ್ಷಗಳ ಹಿಂದೆ ಉತ್ತರ ಪ್ರದೇಶ ಸರಕಾರ ಗೋವಿನ ಹತ್ಯೆಯನ್ನು ನಿಷೇಧಿಸಿದ್ದು ನಮಗೆಲ್ಲಾ ಗೊತ್ತಿದೆ. ಈ ಪರಿಣಾಮವಾಗಿ ಈಗ ಅಲ್ಲಿ ಹಸುಗಳನ್ನು ಮಾಂಸಕ್ಕಾಗಿ ವಧಿಸುವುದು ನಿಂತಿದೆಯಂತೆ. ಹಸುಗಳ ಸಂಖ್ಯೆ ಅತ್ಯಧಿಕ ಪ್ರಮಾಣದಲ್ಲಿ ಇರುವ ರಾಜ್ಯಗಳೆಂದರೆ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ. ಹಸುಗಳನ್ನು ಮಾಂಸಕ್ಕಾಗಿ ಕೊಲ್ಲದೆ ಹಾಗೆ ಉಳಿಸಿದರೆ ಅವುಗಳ ಸಂಖ್ಯೆ ಹೆಚ್ಚುತ್ತದೆ, ಅದೂ ಒಂದು ಅವ್ಯವಸ್ಥೆ ಆಗಿ ಪರಿಣಮಿಸಿದೆ ಎಂಬ ವರದಿಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಉತ್ತರ ಪ್ರದೇಶದ ಅಲೀಘರ್‌ನಲ್ಲಿ ಕೆಲ ವರ್ಷಗಳ ಹಿಂದೆ ಸುಮಾರು 500 ಹಸುಗಳು ರೈತನ ಬೆಳೆ ಇರುವ ಹೊಲದಲ್ಲಿ ಮೇಯುತ್ತಿದ್ದುದನ್ನು ಸ್ಥಳೀಯರು ಹಿಡಿದು ಅದನ್ನು ಸರಕಾರೀ ಶಾಲೆಯಲ್ಲಿ ಕೂಡಿ ಹಾಕಿ ಬೀಗ ಜಡಿದರಂತೆ. ಇದು ಹಸು ಸಾಕುವವರು ಹೊಲದಲ್ಲಿ ಹಸು ಬಿಟ್ಟರೆಂಬ ಕಾರಣಕ್ಕಾಗಿ ಅಲ್ಲವಂತೆ. ಬದಲಿಗೆ ಹಸುಗಳ ಸಂಖ್ಯೆ ಹೆಚ್ಚಳವಾಗಿ ಏನೆಲ್ಲಾ ಅವ್ಯವಸ್ಥೆ ಉಂಟಾಗುತ್ತದೆ ಎಂಬುದರ ಅರಿವು ಸರಕಾರದ ಗಮನಕ್ಕೆ ಬರಲಿ ಎಂಬುದಕ್ಕಂತೆ. ಉತ್ತರ ಪ್ರದೇಶದಲ್ಲಿ ಹಸುಗಳ ವಧೆ ನಿಷೇಧವಾದ ಬಳಿಕ ಗಣನೀಯ ಪ್ರಮಾಣದಲ್ಲಿ ಹಸುಗಳ ಸಂತತಿ ಹೆಚ್ಚಳವಾಗಿದ್ದು, ಎಲ್ಲೆಂದರಲ್ಲಿ ಹಸುಗಳು ಸುತ್ತಾಡುತ್ತಿವೆಯಂತೆ. ಹಸು ಸಾಕಣೆ ಮಾಡುವವರು ಐದು - ಆರು ಕರು ಹಾಕಿದ ನಂತರ ಆ ಹಸು ಕರು ಹಾಕಿದರೂ ಪ್ರಯೋಜನ ಇಲ್ಲ ಎಂದು ಅದನ್ನು ಕಸಾಯಿ ಖಾನೆಯವರಿಗೆ ಮಾರಾಟ ಮಾಡುತ್ತಿದ್ದರಂತೆ. ಹಳೆಯ ಕಾರನ್ನು ಮಾರಿ, ಅದರಲ್ಲಿ ಬಂದ ಅಲ್ಪ ಸ್ವಲ್ಪ ಹಣದಲ್ಲಿ ಹೊಸ ಕಾರು ಖರೀದಿ ಮಾಡಿದಂತೆ ಈ ವ್ಯವಹಾರ ನಡೆಯುತ್ತಿತ್ತಂತೆ. ಈಗ ಕಸಾಯಿ ಖಾನೆಗಳೇ ಬೀಗ ಹಾಕಿದ ಕಾರಣ ಆ ಹಸುಗಳನ್ನು ಕೊಳ್ಳುವವರಿಲ್ಲ, ನಷ್ಟ ಮಾಡಿಕೊಂಡು ಯಾರೂ ಸಾಕುವವರಿಲ್ಲ. ಅದಕ್ಕಾಗಿ ಜನ ಬೀದಿಯಲ್ಲಿ ಹಸುಗಳನ್ನು ಬಿಡುತ್ತಿದ್ದಾರೆ. ಅವು ಹಳ್ಳಿಗಳು, ಪಟ್ಟಣಗಳು ಜನನಿಬಿಡ ಪ್ರದೇಶಗಳು, ರಸ್ತೆ. ರೈಲ್ವೆ


## ಹಸುಗಳು ಹೊರೆಯಾಗುತ್ತಿವೆ : ಪರಿಹಾರ ಏನು?

ಎಲ್ಲೆಂದರಲ್ಲಿ ಸುತ್ತಾಡುತ್ತಾ ಜನಜೀವನಕ್ಕೆ ಕಿರಿಕಿರಿ ಉಂಟು ಮಾಡುತ್ತಿವೆಯಂತೆ. ಇದಕ್ಕೆ ಪರಿಹಾರ ಬೇಕು ಎಂಬುದು ಕೆಲವು ಮಂದಿಯ ಬೇಡಿಕೆ.

ಒಂದು ಹಸು ತನ್ನ ಜೀವಿತಾವಧಿಯಲ್ಲಿ ಕನಿಷ್ಟ 5-6 ಕರುಗಳನ್ನು ಹಾಕುತ್ತದೆ. ಒಬ್ಬ ಒಂದು ಹಸು ಇಟ್ಟುಕೊಂಡರೆ ಐದಾರು ವರ್ಷಗಳಲ್ಲಿ ನಾಲ್ಕೈದು ಹಸುಗಳ ಒಡೆಯನಾಗುತ್ತಾನೆ. ಇದರಲ್ಲಿ ಕೆಲವು ಗಂಡು ಕರುಗಳೂ ಆಗಬಹುದು. ಈಗ ಹೆಣ್ಣು ಕರುವನ್ನೇ ಪಡೆಯುವ ಕೃತಕ ಗರ್ಭಧಾರಣಾ ತಂತ್ರಜ್ಞಾನವೂ ಬಂದಿದೆಯಾದ ಕಾರಣ ಬಹುತೇಕ ಹೆಣ್ಣು ಕರುಗಳೇ ಜನಿಸುತ್ತವೆ. ಒಂದು ಕರು ಸರಿಯಾದ ಸಾಕಾಣಿಕೆಯಲ್ಲಿ ಎರಡನೇ ವರ್ಷಕ್ಕೆ ಮತ್ತೆ ಕರು ಹಾಕುತ್ತದೆ. ಈ ರೀತಿಯಲ್ಲಿ ಹಸುಗಳ ಸಂತಾನಾಭಿವೃದ್ಧಿಯಾಗುತ್ತದೆ. ಇಷ್ಟೆಲ್ಲಾ ಹಸುಗಳು ಮೇಯುವುದಕ್ಕೆ ಎಲ್ಲಿ ಹೋಗಬೇಕು, ಎಷ್ಟು ಆಹಾರ ಬೇಕಾದೀತು, ಇವೆಲ್ಲಾ ಪ್ರಶ್ನೆಗಳು ಸಹಜವಾಗಿ ಬಂದೇ ಬರುತ್ತದೆ. ಹಸುಗಳ ಸಂತಾನ ವೃದ್ಧಿ ಮನುಷ್ಯರಂತೆ ಅಲ್ಲ. ಅದು ತುಂಬಾ ವೇಗ. ಒಬ್ಬ ಮಾನುಷ್ಯನ ಜೀವಿತಾವಧಿಯಲ್ಲಿ ಹಸುಗಳು ಸುಮಾರು 6 ತಲೆಮಾರನ್ನಾದರೂ ಪೂರೈಸುತ್ತದೆ ಎಂದು ಅಂದಾಜು ಮಾಡಬಹುದು. ಹೀಗಿದ್ದಾಗ ಅವುಗಳ ಸಂತಾನ ಎಷ್ಟು ಹೆಚ್ಚಳವಾಬಹುದು?

ಹಸುಗಳ ಸಂತಾನ ನಿಯಂತ್ರಣಕ್ಕೆ ಅವುಗಳನ್ನು ವಧೆ ಮಾಡಬೇಕೇ ಬೇಡವೇ ಎಂಬುದರ ಬಗ್ಗೆ ಯಾವುದೇ ಅಭಿಪ್ರಾಯಗಳನ್ನು ನಾವು ವ್ಯಕ್ತಪಡಿಸುವುದಿಲ್ಲ. ಆದರೂ ಹಸುಗಳ ಸಂತಾನ ವೃದ್ಧಿ ಹೆಚ್ಚಾದಂತೆ ಅದು ಹೊರೆಯಾಗುವ ಬದಲಿಗೆ ಆಸ್ತಿಯಾಗಿ ಬಳಕೆಯಾಗಬಾರದೇ? ಈ ಬಗ್ಗೆ ಕೆಲವೊಂದು ಅಭಿಪ್ರಾಯಗಳನ್ನು ತಿಳಿಸಲು ಇಚ್ಚಿಸುತ್ತೇವೆ. ನಮ್ಮ ದೇಶದಲ್ಲಿ ಹಸುಗಳಿಗೆ ತಾಯಿಯ ಸ್ಥಾನವನ್ನು ಕಲ್ಪಿಸಲಾಗಿದೆ. ಇದು ಸರಿ. ಏಕೆಂದರೆ ಹಸುಗಳ ಹಾಲನ್ನು ಕುಡಿದು ಬದುಕುವ ನಾವು ಅದನ್ನು ಆಸ್ಥಾನವಲ್ಲದೆ ಬೇರೆ ಸ್ಥಾನದಲ್ಲಿ ಇರಿಸಲು ಸಾಧ್ಯವೇ ಇಲ್ಲ. ಹಸುವನ್ನು ತಾಯಿಯ ಸ್ಥಾನದಲ್ಲಿ ಇಟ್ಟರಷ್ಟೇ ಸಾಲದು. ಅದನ್ನು ಕಾಯಾ-ವಾಚ ಪಾಲಿಸಬೇಕು. ಇತ್ತೀಚಿನ ದಿನಗಳಲ್ಲಿ ಜನತೆ ಹೆಚ್ಚು ಹೆಚ್ಚು ವ್ಯಾವಹಾರಿಕವಾಗುತ್ತಿದ್ದು. ಸ್ವಲ್ಪ ಮಟ್ಟಿಗೆ ಕಟುಕರೇ ಆಗುತ್ತಿದ್ದಾರೆ. ಹಸುವನ್ನು ಬರೇ ವ್ಯಾವಹಾರಿಕ ಜೀವಿಯಾಗಿ ಕಾಣುತ್ತಿದ್ದಾರೆ. ಸ್ಥಳೀಯ ತಳಿಗಳ ಹಸುಗಳಂತೂ ಯಾರಿಗೂ ಬೇಡದಂತಾಗಿದೆ. ಇದು ಬೇರೆ ದೇಶಗಳಲ್ಲಿ ಸರಿ ಇರಬಹುದು. ಆದರೆ ನಮ್ಮ ದೇಶದಲ್ಲಿಯಂತೂ ಹಸುಗಳು ಮತ್ತು ಮಾನವನ ಸಂಬಂಧ ಅವಿನಾಭಾವ. ಹಾಲು ಕುಡಿಯದ ಜನರಿಲ್ಲದಿದ್ದರೂ. ನಮ್ಮಲ್ಲಿ ಹಸು ಸಾಕದ ಕೋಟ್ಯಾಂತರ ಜನರಿದ್ದಾರೆ. ಪ್ರತೀ ಮನೆಯಲ್ಲೂ ಒಂದೊಂದಾದರೂ ಹಸುವನ್ನು ಸಾಕುವುದು ಒಳ್ಳೆಯ ಅಭ್ಯಾಸ. ಇದರಿಂದಾಗಿ ಬೆಳಗ್ಗಿನ ಹೊತ್ತಿನ ಸದುಪಯೋಗವಾಗುತ್ತದೆ. ವ್ಯಾಯಾಮ ಆಗುತ್ತದೆ. ಮನೆಯಲ್ಲಿ ಲಭ್ಯವಾಗುವ ಅಕ್ಕಚ್ಚು, ತರಕಾರಿ ಚೂರುಗಳು, ಹೋತೋಟ ಪ್ರೂನಿಂಗ್ ಮಾಡಿದಾಗ ದೊರೆಯುವ ಹಸಿ ಕುಡಿಗಳೂ ಸಹ ಪಶು ಮೇವಾಗುತ್ತದೆ ಒಂದು ಕುಟುಂಬ ಒಂದು ಹಸುವನ್ನು ಸಾಕಲಾರದಷ್ಟು ಬಡತನದಲ್ಲಿಲ್ಲ ಎಂದುದಂತೂ ಸತ್ಯ.

ಹಸುಗಳಿಂದ ಕೃಷಿ ಉಳಿಯುತ್ತದೆ. ಭಾರತ ಕೃಷಿ ಪ್ರಧಾನವಾದ ದೇಶ. ಈ ದೇಶದ ಕೃಷಿಕರೆಲ್ಲರೂ ಹಸು ಸಾಕಾಣೆ ಮಾಡುವುದರಿಂದ ಹಸುಗಳ ರಕ್ಷಣೆ ಆಗುತ್ತದೆ. ಹಸುವಿನ ಹೊಟ್ಟೆ ಎಂಬುದು ಅದ್ಭುತ. ಇದು ಕೇವಲ 4-5 ಗಂಟೆಯೊಳಗೆ ತಿಂದ ಆಹಾರವನ್ನು ಸಗಣಿ ರೂಪದಲ್ಲಿ ಗೊಬ್ಬರವಾಗಿ ವಾಪಾಸು ಕೊಡುವ ಶಕ್ತಿ ಹೊಂದಿದೆ. ಯಾವುದೇ ಆಧುನಿಕ ತಂತ್ರಜ್ಞಾನದ ಆವಿಷ್ಕಾರದಲ್ಲೂ ಇಷ್ಟು ತ್ವರಿತವಾಗಿ ಗೊಬ್ಬರ ತಯಾರಿಸಿಕೊಡುವ ವ್ಯವಸ್ಥೆ ಬಂದಿಲ್ಲ. ಹಸುಗಳಿಗೆ ಅವುಗಳು ತಿನ್ನುವ ಯಾವುದೇ ವಸ್ತು ಕೊಟ್ಟರೂ ಅದರಲ್ಲಿ ಸ್ವಲ್ಪ ಮಟ್ಟಿನ ಸತ್ವಾಂಶವನ್ನು ತನ್ನ ಶರೀರ ಪೊಷಣೆಗೆ ಬಳಸಿಕೊಂಡು, ಉಳಿದ ಬಹುಪ್ರಮಾಣವನ್ನು ಮರಳಿ ಕೊಡುತ್ತದೆ. ಹಸುವಿನ ಹೊಟ್ಟೆಯೊಳಗೆ ಹೋದ ಆಹಾರ ವಸ್ತುಗಳು ಅದರ ಚಯಾಪಚಯ ಕ್ರಿಯೆಯಲ್ಲಿ ಕೆಲವು ಸೂಕ್ಷ್ಮಾಣು ಜೀವಿಗಳೊಂದಿಗೆ ಬೆರೆತು ಹೊರ ಬರುತ್ತದೆಯಾದ ಕಾರಣ ಇದಕ್ಕೆ ಉತ್ತಮ ಪೋಷಕ ಶಕ್ತಿ ಇದೆ. ಇದನ್ನು ಅರ್ಥಮಾಡಿಕೊಳ್ಳದೆ ಕೃಷಿಕರು ತಮ್ಮ ಹಸುಗಳನ್ನು ಹಾಲು ಕೊಡದ ಸಮಯದಲ್ಲಿ ವಧೆಗೆ ಅಟ್ಟುತ್ತಾರೆ.





ಹಸುಗಳ ಸಂತಾನ ಹೆಚ್ಚಳವಾಗದಂತೆ ತಡೆಯಲು ಅದನ್ನು ನಿಯಮಿತವಾಗಿ ಗರ್ಭದಾರಣೆ ಮಾಡಿಸಿದರೆ ಸಾಕು. ಈಗ ಹಸುಗಳು ಹಾಲು ಕೊಡಲು ಕರು ಹಾಕಬೇಕೆಂದಿಲ್ಲ. ಕರು ಹಾಕದೆಯೂ ಹಾಲು ಪಡೆಯುವ ತಾಂತ್ರಿಕತೆ ಇದೆ. ಇದನ್ನು ಅನಿವಾರ್ಯ ಸಂದರ್ಭಗಳಲ್ಲಿ ಬಳಸಿಕೊಳ್ಳಬಹುದು. ಉತ್ತರ ಪ್ರದೇಶದಲ್ಲಿ ಬಹುಷಃ ಗೋ ಹತ್ಯೆ ನಿಷೇಧಿಸಿದ್ದು ಮಾತ್ರ ಇರಬಹುದು. ಗೋ ಹತ್ಯೆ ನಿಷೇಧ ಒಂದರಿಂದಲೇ ಎಲ್ಲವೂ ಪರಿಹಾರವಾಗಲಾರದು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಅಲ್ಲಿ ತಲೆ ಎತ್ತಿರುವ ಅಪಸ್ವರಕ್ಕೆ ಪೂರ್ವ ತಯಾರಿ ಇಲ್ಲದೆ ಈ ಕಾಯ್ದೆಯನ್ನು ಜಾರಿಗೆ ತಂದಿರುವುದೇ ಕಾರಣ ಇರಬೇಕು. ಗೋ ಹತ್ಯೆ ನೋವು ಮಾಡಬಾರದು ಎಂದಾದರೆ ಹೆಚ್ಚಳವಾಗುವ ಗೋವಿನ ಸಂತತಿಗೆ ಏನು ವ್ಯವಸ್ಥೆ ಎಂಬುದೂ ಬೇಕಲ್ಲವೇ, ಬಹುಷಃ ನಮ್ಮ ಕರ್ನಾಟಕದಂತೆ - ಇಲ್ಲಿಯೂ ಹಸು ಮೇಯುವ ಜಾಗವನ್ನೂ ಜನ ಅತಿಕ್ರಮಣ ಮಾಡಿದ್ದಿರಬಹುದು. ಸರಕಾರ ಓಟಿನ ಆಶೆಗೆ ಅದನ್ನು ಬಡ ಜನರಿಗೆ - ಕೊಟ್ಟಿರಬಹುದು. ಹಸು ಸಂರಕ್ಷಣೆ ಬೇಕೆಂದಾದರೆ ಹಸುಗಳಿಗೆ ಮೇಯಲು ವಿಶಾಲ ಸ್ಥಳಾವಕಾಶ ಬೇಕು. ಇದು ನಮ್ಮನ್ನಾಳಿದ ಬ್ರಿಟೀಷರಿಗೂ ಮನವರಿಕೆಯಾಗಿತ್ತು. ಆದರೆ ನಮಗೆ ಅದು ಮರೆತೇ ಹೋಗಿದೆ ಸರಕಾರ ಗೋವುಗಳನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿದರೆ ಅದು ತಪ್ಪಲ್ಲ, ಆದರೆ ಅದಕ್ಕೆ ಸೂಕ್ತ ರಕ್ಷಣಾ ವ್ಯವಸ್ಥೆಯನ್ನೂ ಮಾಡಬೇಕು. ಗೋವುಗಳ ಸಂರಕ್ಷಣೆಗೆ ಕಟಿಬದ್ದರಾಗಿ ನಿಂತವರು, ಸರಕಾರ ಮರೆತಿದ್ದರೆ ಅದನ್ನು ನೆನಪಿಸಿಕೊಡಬೇಕು.

**- ರಾಧಾಕೃಷ್ಣ** ಹೊಳ್ಳ

## ದ್ವಿಭಾಷಾ ನೀತಿ ವಿರುದ್ಧ ರಾಜ್ಯಪಾಲರಿಗೆ ದೂರು

**ಬೆಂಗಳೂರು:** ರಾಜ್ಯ ಶಿಕ್ಷಣ ನೀತಿ ಆಯೋಗವು ರಾಜ್ಯದ ಎಲ್ಲಾ ಶಾಲೆಗಳಲ್ಲಿ 1 ರಿಂದ 5ನೇ ತರಗತಿವರೆಗೆ ದ್ವಿಭಾಷಾ ನೀತಿ ಜಾರಿಗೆ ಸರ್ಕಾರ ಮುಂದಾಗಿದ್ದು, ಅದನ್ನು ವಿರೋಧಿಸಿ ರಾಜ್ಯಪಾಲರಿಗೆ ದೂರು ನೀಡಲಾಗಿದೆ.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ನಿಯೋಗ ಮಂಗಳವಾರ ಲೋಕಭವನದಲ್ಲಿ ಗವರ್ನರ್ ಥಾವರ್ ಚೆಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ದೂರು ನೀಡಿದೆ. ಕನ್ನಡ ಭಾಷೆಯನ್ನು ತೆರೆಮರೆಗೆ ಸರಿಸುವ ಕುತಂತ್ರವಾಗಿದೆ. ಹೀಗಾಗಿ ಇದಕ್ಕೆ ಅವಕಾಶ ನೀಡಬೇಡಿ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ನಿಯೋಗವು ರಾಜ್ಯಪಾಲರಿಗೆ ಮನವಿ ಮಾಡಿದೆ.

ಹಾಲಿ ನಮ್ಮಲ್ಲಿ ತ್ರಿಭಾಷಾ ನೀತಿ ಜಾರಿಯಲ್ಲಿದೆ. ಪ್ರಥಮ- ಕನ್ನಡ, ದ್ವಿತೀಯ- ಆಂಗ್ಲಭಾಷೆ ಮತ್ತು ತೃತೀಯ- ಹಿಂದಿ ಭಾಷೆ ಬೋಧನೆ ಮಾಡಲಾಗುತ್ತಿದೆ. ದ್ವಿಭಾಷಾ ನೀತಿ ಜಾರಿಗೆ ಬಂದ ಮೇಲೆ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಪ್ರಥಮ ಹಾಗೂ ದ್ವಿತೀಯ ಆಂಗ್ಲ ಮಾಧ್ಯಮವಾಗಿ ಮಾತ್ರ ವ್ಯಾಸಂಗ ಮಾಡುತ್ತಾರೆ. ತೃತೀಯ ಭಾಷೆ ಇರುವುದಿಲ್ಲ.

# ಶಿಸ್ತು, ಸಂಸ್ಕಾರ, ಆತ್ಮವಿಶ್ವಾಸದಿಂದ ಯಶಸ್ಸು ಸಾಧ್ಯ

### ವಿದ್ಯಾರ್ಥಿಗಳಿಗೆ ಶಾಸಕ ಹೆಚ್.ಕೆ.ಸುರೇಶ್ | ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕಿವಿಮಾತು

• ಪ್ರಜೋದಯ ವರದಿ

**ಬೇಲೂರು:** ವಿದ್ಯಾರ್ಥಿಗಳು ಉತ್ತಮ ಶಿಕ್ಷಣದೊಂದಿಗೆ ಶಿಸ್ತು, ಸಂಸ್ಕಾರ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ ಎಂದು ಶಾಸಕ ಹೆಚ್.ಕೆ. ಸುರೇಶ್ ಅವರು ಕಿವಿಮಾತು ಹೇಳಿದರು.

ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿ, ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಾಗಿರದೆ, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಹಾಗೂ ಸಮಾಜಕ್ಕೆ ಮಾದರಿಯಾದ ನಾಗರಿಕರಾಗಿ ಬೆಳೆಯಲು ನೆರವಾಗಬೇಕು ಎಂದು ತಿಳಿಸಿದರು.

ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ, ಶಿಸ್ತು, ಸಮಯ ಪಾಲನೆ ಹಾಗೂ ಸಾಮಾಜಿಕ ಹೊಣೆಗಾರಿಕೆಯೂ ಬೆಳೆಯಬೇಕು. ಹಿರಿಯರ ಗೌರವ, ನೈತಿಕ ಮೌಲ್ಯಗಳು ಮತ್ತು ಶಿಸ್ತಿನ ಮಹತ್ವವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಪಠ್ಯ ಶಿಕ್ಷಣದೊಂದಿಗೆ ಮೌಲ್ಯಾಧಾರಿತ ಶಿಕ್ಷಣಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲೆ ವೀಣಾ ಮಾತನಾಡಿ, ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಶಾಸಕ ಹೆಚ್.ಕೆ.ಸುರೇಶ್ ಅವರ ಸಹಕಾರ ಮಹತ್ವದ್ದಾಗಿದೆ. ಹೆಚ್ಚುವರಿ ಕೊಠಡಿಗಳು, ಹೈಟೆಕ್ ಶೌಚಾಲಯ, ಗುಣಮಟ್ಟದ ರಸ್ತೆ ಹಾಗೂ ಸಭಾಂಗಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿವೆ. ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ಫಲಿತಾಂಶದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ವ್ಯಕ್ತಿತ್ವ ವಿಕಸನ ಚಟುವಟಿಕೆಗಳಿಗೂ ಸಮಾನ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ರೋಟರಿ ಕ್ಲಬ್ ಝೋನ್8ರ ಸಹಾಯಕ ಗೌವರ್ನರ್ ಡಾ.ಎಸ್. ಗಣೇಶ್ ಮಾತನಾಡಿ, ವಿದ್ಯಾರ್ಥಿ ಜೀವನವು ಭವಿಷ್ಯ ರೂಪಿಸುವ ಅತ್ಯಂತ ಮಹತ್ವದ ಹಂತವಾಗಿದೆ. ವಿದ್ಯಾರ್ಥಿಗಳು ಗುರುಗಳನ್ನು ಗೌರವಿಸಿ ಶಿಸ್ತು, ಸಮಯಪಾಲನೆ ಹಾಗೂ ಉತ್ತಮ ನಡವಳಿಕೆಯನ್ನು ರೂಢಿಸಿಕೊಳ್ಳಬೇಕು ಎಂದರಲ್ಲದೆ, ಕೇವಲ ಅಂಕಗಳಿಗೆ ಸೀಮಿತವಾಗದೆ ಸೇವಾ ಮನೋಭಾವ, ಸಮಾಜಮುಖಿ ಚಿಂತನೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಬೇಕು ಎಂದು ಅವರು ಸಲಹೆ ನೀಡಿದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಮಂಜುನಾಥ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳ ತೀವ್ರ ಪೈಪೋಟಿಯ ನಡುವೆಯೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಶಿಸ್ತು, ಗುಣಮಟ್ಟದ ಶಿಕ್ಷಣ ಹಾಗೂ ಅತ್ಯುತ್ತಮ ಫಲಿತಾಂಶದ ಮೂಲಕ ಮಾದರಿ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ. ಉಪನ್ಯಾಸಕರ ಬದ್ಧತೆ ಹಾಗೂ ವಿದ್ಯಾರ್ಥಿಗಳ ಪರಿಶ್ರಮವೇ ಕಾಲೇಜಿನ ಯಶಸ್ಸಿನ ಹಿಂದಿನ ಪ್ರಮುಖ ಕಾರಣವಾಗಿದೆ ಎಂದು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಶೋಭಾ ಗಣೇಶ, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜ್, ಉಪನ್ಯಾಸಕರಾದ ಡಾ.ಗಣೇಶ್, ಧರ್ಮೇಗೌಡ, ನಿಂಗೇಗೌಡ, ಪ್ರೌಢ ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ, ಬಿಜೆಪಿ ಮುಖಂಡ ರಂಗನಾಥ್ ಇನ್ನಿತರರು ಉಪಸ್ಥಿತರಿದ್ದರು.



### ಉನ್ನತ ಶಿಕ್ಷಣಕ್ಕೆ ನೆರವು

ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ರೋಟರಿ ಕ್ಲಬ್‌ನಿಂದ ವಿಶೇಷ ನೆರವು ನೀಡಲಾಗುವುದು. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವು ನೀಡುವ ಉದ್ದೇಶದಿಂದ ರೋಟರಿ ಕ್ಲಬ್ ವತಿಯಿಂದ ಶಾಸಕ ಹೆಚ್.ಕೆ.ಸುರೇಶ್ ಅವರ ಸಹಕಾರದೊಂದಿಗೆ ವಿಶೇಷ ಶೈಕ್ಷಣಿಕ ನೆರವು ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು

– ಬಿ.ಬಿ.ಶಿವರಾಜು, ಬೇಲೂರು ರೋಟರಿ ಕ್ಲಬ್ ಅಧ್ಯಕ್ಷ,

## ಎಸ್‌ಐಆರ್: ಶೇ.85.41 ರಷ್ಟು ಪ್ರಗತಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ತಾಲ್ಲೂಕಿನಲ್ಲಿ ಶೇ.85.41ರಷ್ಟು ಪ್ರಗತಿಯಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಮಿನಿ ವಿಧಾನಸೌಧ ಸಭಾಂಗಣದಲ್ಲಿ ಮಂಗಳವಾರ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಸಭೆಯಲ್ಲಿ ಮಾತನಾಡಿ, ಯಾವುದೇ ಒಬ್ಬ ಅರ್ಹ ಮತದಾರರು ಈ ವಿಶೇಷ ಸಮಗ್ರ ಪರಿಷ್ಕರಣೆಯ ಪಟ್ಟಿಯಿಂದ ಹೊರಗುಳಿಯಬಾರದು. ಭಾರತ ಸರ್ಕಾರದ ಮತ್ತು ಚುನಾವಣಾ ಆಯೋಗದ ಉತ್ತಮ ಕಾರ್ಯಕ್ರಮವಾಗಿದೆ. ಈ ವರೆಗೆ ತಾಲ್ಲೂಕಿನಲ್ಲಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು ಶೇ. 85.41 ರಷ್ಟು ಗುರಿ ತಲುಪಿದ್ದೇವೆಂದು ಅವರು ತಿಳಿಸಿದರು.

ಚನ್ನರಾಯಪಟ್ಟಣ ನಗರದಲ್ಲಿ ಎಸ್ ಐಆರ್ ಪರಿಷ್ಕರಣೆ ಶೇ. 60ಕ್ಕಿಂತ ಕಡಿಮೆ ಆಗಿರುವುದರಿಂದ ಹೆಚ್ಚಿನ ಸಿಬ್ಬಂದಿ ನಿಯೋಜನೆ ಮಾಡಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಚುನಾವಣಾ ಅಧಿಕಾರಿಗೆ ಸಲಹೆ ನೀಡಿದ ಅವರು, ಜು. 29 ಅಥವಾ 30ರೊಳಗೆ ಶೇ. 100ರಷ್ಟು ಪರಿಷ್ಕರಣೆ ಮುಗಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ 263 ಮತಗಟ್ಟೆಗಳಲ್ಲೂ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ 2026ರ ಕಾರ್ಯ ಸಮರೋಪಾದಿಯಲ್ಲಿ ಸಾಗುತ್ತಿದೆ. ಈ ವರೆಗೆ ವಿತರಿಸಲಾದ 2,14,454 ಎನ್ಯುಮರೇಷನ್ ನಮೂನೆ ಪೈಕಿ 1,83,167 ಭರ್ತಿಯಾಗಿದೆ. ಅವಶ್ಯಕತೆ ಬಿದ್ದರೆ ಹೊಸ ಬೋರ್‌ವೆಲ್ ಕೊರೆಸಿ ಕುಡಿಯುವ ನೀರು ಪೂರೈಸಲಾಗುವುದೆಂದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ಪುರಸಭಾ ಮುಖ್ಯಾಧಿಕಾರಿ ಆರ್ .ಯತೀಶ್ ಕುಮಾರ್, ಗ್ರೇಡ್ 2 ತಹಶೀಲ್ದಾರ್ ಗಿರೀಶ್ ಬಾಬು, ಚುನಾವಣಾ ಶಿರಸ್ತೇದಾರ್ ಅನಿಲ್, ತಾಪಂ ವ್ಯವಸ್ಥಾಪಕ ಗಿರೀಶ್, ಕಂದಾಯ ಶಿರಸ್ತೇದಾರರು ಹಾಗು ಇತರರಿದ್ದರು.

# 1.30 ಕೋ. ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ

### ಅಭಿವೃದ್ಧಿ ವಿಚಾರದಲ್ಲಿ ರಾಜಕೀಯಕ್ಕೆ ಅವಕಾಶವಿಲ್ಲ

• ಪ್ರಜೋದಯ ವರದಿ

**ಸಕಲೇಶಪುರ:** ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಗುಣಮಟ್ಟದ ರಸ್ತೆ ನಿರ್ಮಾಣ ಅತ್ಯಗತ್ಯವಾಗಿದ್ದು, ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಬ್ಬಸಾಲೆ ಮುಖ್ಯ ರಸ್ತೆಯಿಂದ ಅಜ್ಜಿಗುಡ್ಡೆ ಗ್ರಾಮದವರೆಗೆ 1.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ನೂತನ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದು, ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯಕ್ಕೆ ಅವಕಾಶವಿಲ್ಲ. ಜನರ ಹಿತವೇ ತಮ್ಮ ರಾಜಕೀಯವಾಗಿದ್ದು, ಜನರ ಅಗತ್ಯಗಳಿಗೆ ಸ್ಪಂದಿಸಿ ಗುಣಮಟ್ಟದ ಮೂಲಸೌಕರ್ಯ ಕಲ್ಪಿಸುವುದು ತಮ್ಮ ಬದ್ಧತೆಯಾಗಿದೆ ಎಂದು ಹೇಳಿದರು.



ಅಭಿವೃದ್ಧಿ ಕಾಮಗಾರಿಗಳು ಯಾವುದೇ ಪಕ್ಷ ಅಥವಾ ವ್ಯಕ್ತಿಗೆ ಸೀಮಿತವಾಗಿಲ್ಲ. ಕ್ಷೇತ್ರದ ಪ್ರತಿಯೊಬ್ಬ ನಾಗರಿಕರ ಹಿತದೃಷ್ಟಿಯಿಂದ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು, ಮುಂದೆಯೂ ಜನರ ವಿಶ್ವಾಸಕ್ಕೆ ತಕ್ಕಂತೆ ಗುಣಮಟ್ಟದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಬ್ಲಾಕ್ ಮಾಜಿ ಅಧ್ಯಕ್ಷ ಎಚ್.ಬಿ.ಭಾಸ್ಕರ್ ಮಾತನಾಡಿ, ಹೆಬ್ಬಸಾಲೆ- ಅಜ್ಜಿಗುಡ್ಡೆ ರಸ್ತೆ ನಿರ್ಮಾಣವು ಸ್ಥಳೀಯರ ಬಹುಕಾಲದ ಬೇಡಿಕೆಯಾಗಿದ್ದು, ರಾಜ್ಯ ಸರ್ಕಾರದ ಅನುದಾನದಿಂದ ಕಾಮಗಾರಿಗೆ ಚಾಲನೆ ದೊರೆತಿರುವುದು ಸಂತಸದ ವಿಚಾರವಾಗಿದೆ ಎಂದು ಅವರು ಹೇಳಿದರು.

ಕ್ಷೇತ್ರದ ಅಭಿವೃದ್ಧಿಗೆ ರಾಜಕೀಯ ಮೀರಿದ ಸಹಕಾರ ಅಗತ್ಯವಾಗಿದೆ. ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಾಮಗಾರಿಗಳಿಗೆ ಸರ್ಕಾರ ಅಗತ್ಯ ಅನುದಾನ ನೀಡುತ್ತಿದ್ದು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ರಸ್ತೆ ಅಗಲೀಕರಣ ಅಗತ್ಯವಿರುವ ಸ್ಥಳಗಳಲ್ಲಿ ಗ್ರಾಮಸ್ಥರು ಸಹಕಾರ ನೀಡಿ ಜಾಗ ಬಿಟ್ಟುಕೊಟ್ಟರೆ ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಡಿ.ಸಿ. ಸಣ್ಣಸ್ವಾಮಿ, ಹೆಬ್ಬಸಾಲೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ್ ಶೆಟ್ಟಿ, ಮುಖಂಡರಾದ ಡಾ. ಸುಧಾಕರ್, ಮೇಘರಾಜ್, ಕೌಶಿಕ್, ಶ್ರೀಜಿತ್, ಆದಿತ್ಯ, ಪ್ರಭಾಕರ್ ಸೇರಿದಂತೆ ಸ್ಥಳೀಯ ಮುಖಂಡರು, ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

### ನಾಲ್ಕು ವಿಧದಲ್ಲಿ ಕಸ ವಿಂಗಡಣೆ ಮಾಡಿ ನೀಡುವುದು ಕಡ್ಡಾಯ

# ಅರಕಲಗೂಡು: ಘನತ್ಯಾಜ್ಯ ನಿರ್ವಹಣೆ ನೀತಿ ಜಾರಿ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಸ್ವಚ್ಛತೆ ಕಾಪಾಡುವ ಹಾಗೂ ಸಾರ್ವಜನಿಕ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ನೂತನ ಘನತ್ಯಾಜ್ಯ ನಿರ್ವಹಣೆ ನೀತಿಯು ಜಾರಿಯಾಗಿದ್ದು ನಾಲ್ಕು ವಿಧದಲ್ಲಿ ಕಸ ವಿಂಗಡಣೆ ಮಾಡಿ ನೀಡುವುದು ಕಡ್ಡಾಯವಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರಕುಮಾರ್ ತಿಳಿಸಿದರು.

ಮಂಗಳವಾರ ಪ.ಪಂ. ಕಚೇರಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಪ್ರತಿಯೊಬ್ಬರೂ ತಮ್ಮ ಮನೆ ಹಾಗೂ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕಡ್ಡಾಯವಾಗಿ ನಾಲ್ಕು ಪ್ರತ್ಯೇಕ ವಿಭಾಗಗಳಾಗಿ ವಿಂಗಡಿಸಿ ಸ್ಥಳೀಯ ಪೌರಕಾರ್ಮಿಕರಿಗೆ ನೀಡಬೇಕಾಗುತ್ತದೆ. ವಾಣಿಜ್ಯ ಹಾಗೂ ಕೈಗಾರಿಕಾ ಚಟುವಟಿಕೆಗಳು ಗಣನೀಯವಾಗಿ ಹೆಚ್ಚಿರುವುದರಿಂದ ತ್ಯಾಜ್ಯ ಉತ್ಪಾದನೆಯ ಪ್ರಮಾಣವೂ ದ್ವಿಗುಣಗೊಂಡಿದೆ. ಹೀಗಾಗಿ ಪಟ್ಟಣದ ಸೌಂದರ್ಯ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಕಸವನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸುವುದು ಈಗ ಅನಿವಾರ್ಯವಾಗಿದೆ. ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ತ್ಯಾಜ್ಯ, ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಹಾಗೂ ವಿಶೇಷ ಕಾಳಜಿ ತ್ಯಾಜ್ಯ ಎಂದು ಕಡ್ಡಾಯವಾಗಿ ನಾಲ್ಕು ಭಾಗಗಳಾಗಿ ಬೇರ್ಪಡಿಸಬೇಕು. ಇದಕ್ಕಾಗಿ ಕಸ ಸಂಗ್ರಹಣಾ ವಾಹನಗಳಲ್ಲಿ ಪ್ರತ್ಯೇಕ ಡಬ್ಬಿಗಳನ್ನು ಅಳವಡಿಸಲಾಗಿದೆ ಎಂದು ಅವರು ತಿಳಿಸಿದರು.



ಪಟ್ಟಣದ ಶೇ. 90 ರಷ್ಟು ಮಂದಿ ನಿಯಮಗಳಿಗೆ ಸಹಕರಿಸುತ್ತಿದ್ದು, ಬಾಕಿ ಉಳಿದವರೂ ಸಂಪೂರ್ಣ ಸಹಕಾರ ನೀಡಬೇಕು, ಘನತ್ಯಾಜ್ಯ ನಿರ್ವಹಣೆ ಕೇವಲ ಸ್ಥಳೀಯ ಆಡಳಿತದ ನಿರ್ಧಾರವಲ್ಲ, ಸರ್ವೋಚ್ಚ ನ್ಯಾಯಾಲಯದ ಕಟ್ಟುನಿಟ್ಟಿನ ಆದೇಶವಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಪಟ್ಟಣ ಪಂಚಾಯಿತಿಯಿಂದ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸಾರ್ವಜನಿಕರು ಕಸ ವಿಲೇವಾರಿ ಕೇವಲ ಪುರಸಭೆಯ ಜವಾಬ್ದಾರಿ ಎಂಬ ತಪ್ಪು ಕಲ್ಪನೆಯಿಂದ ಹೊರಬಂದು ನಮ್ಮ ಕಸ, ನಮ್ಮ ಜವಾಬ್ದಾರಿ ಎಂಬ ಅರಿವು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ದೇವರಹಳ್ಳಿ ಗ್ರಾಮದ ಬಳಿ ಎರಡು ಎಕರೆ ಜಾಗದಲ್ಲಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಘಟಕವನ್ನು ಈಗಾಗಲೇ ಸ್ಥಾಪಿಸಲಾಗಿದೆ. ಅಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗಿದ್ದು, ರಸಗೊಬ್ಬರ ತಯಾರಿಕೆ ಕಾರ್ಯ ಆರಂಭವಾಗಿದೆ. ಹಲವು ವರ್ಷಗಳಿಂದ ವಿಲೇವಾರಿಯಾಗದೆ ಉಳಿದಿದ್ದ ಹಳೆಯ ತ್ಯಾಜ್ಯವನ್ನು ಸಹ ವಿಂಗಡಿಸಿ ಗೊಬ್ಬರ ಹಾಗೂ ಮರುಬಳಕೆಗೆ ಸೂಕ್ತವಾಗುವಂತೆ ಸಂಸ್ಕರಿಸಲಾಗುತ್ತಿದೆ. ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರದಲ್ಲೆ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ. ಪಟ್ಟಣ ವ್ಯಾಪ್ತಿಯ ರಸ್ತೆಗಳ ಅಭಿವೃದ್ದಿಗೆ ಕ್ರಮ ಕೈಗೊಳ್ಳುತ್ತಿದ್ದು, ಗುಜರಿ ಅಂಗಡಿಗಳನ್ನು ಪಟ್ಟಣ ಹೊರವಲಯಕ್ಕೆ ಕಳಿಸಲು ಕ್ರಮ ರೂಪಿಸುವುದಾಗಿ ಹೇಳಿದರು.

ಆರೋಗ್ಯಾಧಿಕಾರಿ ಚೇತನ್ ಇನ್ನಿತರರು ಉಪಸ್ಥಿತರಿದ್ದರು.

# ಜಮೀನು ವಿವಾದ: ಬೆಳೆ ನಾಶ, ಹಲ್ಲೆ ಆರೋಪ

• ಪ್ರಜೋದಯ ವರದಿ

**ಹಾಸನ:** ಜಮೀನಿನ ವಿವಾದ ನ್ಯಾಯಾಲಯದಲ್ಲಿದ್ದರೂ ಬೆಳೆ ಬೆಳೆಯನ್ನು ಟ್ರ್ಯಾಕ್ಟರ್‌ನಲ್ಲಿ ನಾಶ ಮಾಡಿ, ರೌಡಿಗಳನ್ನು ಕರೆಸಿ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಬಗ್ಗೆ ದೂರು ನೀಡಿದರೂ ಪೊಲೀಸರು ಪ್ರಭಾವಿಗಳ ಒತ್ತಡಕ್ಕೆ ಮಣಿದು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬೇಲೂರು ತಾಲ್ಲೂಕು ಮಲ್ಲನಹಳ್ಳಿಯ ಬಾಲಚಂದ್ರ ದೂರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ತಂದೆ ಬಸವರಾಜು ಅವರ ತಂದೆಯ ಹೆಸರಿನಲ್ಲಿ ಮುತ್ತುಗನ್ನೆ ಗ್ರಾಮದ ಸ.ನಂ. 227ರಲ್ಲಿ 6 ಎಕರೆ ಜಮೀನಿತ್ತು. ಅಜ್ಜನ ಕಾಲಾನಂತರ 4 ಎಕರೆ ತಂದೆ ಹೆಸರಿಗೆ ಖಾತೆ ಆಗಿದೆ. ಅಲ್ಲೆ ನಾವು ಮನೆ ಕಟ್ಟಿಕೊಂಡು ವಾಸವಾಗಿದ್ದೇವೆ. ಅದೇ ಭೂಮಿಯಲ್ಲಿ ಉಳಿಮೆ ಮಾಡಿ ಜೀವನ ಸಾಗಿಸುತ್ತಿದ್ದೇವೆ. ಉಳಿದ ಎರಡು ಎಕರೆ ವಿವಾದ ಹಿನ್ನೆಲೆಯಲ್ಲಿ ನಾವು ಕೋರ್ಟ್ ಮೊರೆ ಹೋಗಿದ್ದು ಅಲ್ಲಿ ವಿಚಾರಣೆ ನಡೆಯುತ್ತಿದೆ ಎಂದರು.

ಈ ನಡುವೆ ಸರಸ್ವತಿ ಎಂಬುವರು 2 ಎಕರೆ ಜಮೀನು ನಮಗೆ ಸೇರಬೇಕು ಎಂದು ಅವರ ಮಗ ದಿಲೀಪ ಹಾಗೂ ಆನಂದ, ಚೇತನ್, ಲೋಕೇಶ್ ಎಂಬುವವರು ಸುಮಾರು 20 ಜನ ರೌಡಿಗಳನ್ನು ಕರೆದುಕೊಂಡು ಬಂದು ಜು.18 ರಂದು ಹಲ್ಲೆ ನಡೆಸಿದ್ದಾರೆ. ಮಾತ್ರವಲ್ಲದೆ ಟ್ರ್ಯಾಕ್ಟರ್‌ಗಳ ಮೂಲಕ ಜಮೀನಲ್ಲಿ ಬೆಳೆದಿದ್ದ ಮೆಕ್ಕೆಜೋಳವನ್ನು ನಾಶಪಡಿಸಿದ್ದಾರೆ. ಕೋಟನಲ್ಲಿರುವ ಕೇಸ್ ವಾಪಾಸ್ ಪಡೆಯದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ಇದರಿಂದ ನಮಗೆ ಭಯವಾಗಿದೆ ಎಂದು ಆತಂಕ ಹೊರ ಹಾಕಿದರು.




ಜಮೀನು ಬಳಿ ಇರುವುದು ನಮ್ಮದೊಂದೇ ಒಂಟಿ ಮನೆ ಕುಟುಂಬ. ಆಗಾಗ ಅಲ್ಲಿಗೆ ಬಂದು ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ. ಈ ನಡುವೆ ನಮ್ಮ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದರೂ ಪ್ರಭಾವಿಗಳ ಒತ್ತಡದಿಂದ ಈ ವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ನಮಗೆ ಪದೇ ಪದೆ ಬೆದರಿಕೆ ಒಡ್ಡುತ್ತಿದ್ದು,ನಮಗೆ ಸೂಕ್ತ ರಕ್ಷಣೆ ನೀಡಬೇಕು. ನಮ್ಮ ಮೇಲೆ ಹಲ್ಲೆ ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕು. ಸ್ಥಳೀಯ ಪೊಲೀಸರಿಂದ ಯಾವುದೇ ರಕ್ಷಣೆ ಸಿಗದ ಕಾರಣ ಇದೀಗ ಎಸ್ಪಿ ಅವರಿಗೆ ದೂರು ನೀಡಲು ನಿರ್ಧರಿಸಿದ್ದೇವೆ. ನಮಗೆ ನ್ಯಾಯ ಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಟಿಯಲ್ಲಿ ಬಾಲಚಂದ್ರ, ಪೋಷಕರಾದ ಬಸವರಾಜು, ಶೈಲಾ, ಪತ್ನಿ ರಂಜಿತಾ, ಸಹೋದರಿ ವೇದಾವತಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡಲು ಯಾರಿಗೂ ಅವಕಾಶವಿಲ್ಲ

### ಪ್ರಶ್ನೆಪತ್ರಿಕೆ ಸೋರಿಕೆ ಆರೋಪಿಗಳ ವಿರುದ್ಧ ಕಠಿಣ ಕ್ರಮ: ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ಯುವಕರ ಭವಿಷ್ಯದೊಂದಿಗೆ ಯಾರೂ ಆಟವಾಡಲು ಅವಕಾಶ ನೀಡುವುದಿಲ್ಲ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಮಂಗಳವಾರ ನಡೆದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಸಂಸದೀಯ ಪಕ್ಷದ 'ಮಂಗಲ್ ಮಿಲನ್' ಸಭೆಯಲ್ಲಿ ಪ್ರಧಾನಿ ಮೋದಿ ಅವರು ಈ ವಿಷಯ ಪ್ರಸ್ತಾಪಿಸಿದರು.

ಈ ಸಭೆ, ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳನ್ನು ವಿರೋಧಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಕಾಕ್‌ರೋಚ್ ಜನತಾ ಪಾರ್ಟಿ ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿಗಳು 'ಸಂಸತ್ ಚಲೋ' ಪ್ರತಿಭಟನೆ ನಡೆಸಿದ ಮರುದಿನವೇ ನಡೆಯಿತು.

ಸಭೆಯಲ್ಲಿ ಪ್ರಧಾನಮಂತ್ರಿಗಳು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜಕೀಯ ಭೇದ ಮರೆತು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.



ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಪ್ರಶ್ನೆಪತ್ರಿಕೆ ಸೋರಿಕೆ ಬೆಳಕಿಗೆ ಬಂದ ತಕ್ಷಣವೇ ಸರ್ಕಾರ ಕ್ರಮ ಕೈಗೊಂಡಿದ್ದು, ಪ್ರಕರಣದಲ್ಲಿ 13 ಮಂದಿಯನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಪ್ರಧಾನಿ ಸಂಸದರಿಗೆ ತಿಳಿಸಿದರು ಎಂದರು.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಲು ನೀಟ್ ಮರುಪರೀಕ್ಷೆಗೆ ಆದ್ಯತೆ ನೀಡಲಾಯಿತು. ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ, ಫಲಿತಾಂಶವನ್ನೂ ಯಾವುದೇ ವಿಳಂಬವಿಲ್ಲದೆ ಪ್ರಕಟಿಸಲಾಯಿತು ಎಂದು ಪ್ರಧಾನಿ ತಿಳಿಸಿದ್ದಾರೆ ಎಂದು ರಿಜಿಜು ಹೇಳಿದರು.

ಇದೇ ರೀತಿಯ ಪ್ರಶ್ನೆಪತ್ರಿಕೆ ಸೋರಿಕೆಗಳು ಮರುಕಳಿಸದಂತೆ ಈಗಾಗಲೇ ಹಲವು ಕಠಿಣ ಕ್ರಮಗಳನ್ನು ಜಾರಿಗೆ ತರಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಜಾಲದಲ್ಲಿ ಭಾಗಿಯಾಗಿರುವವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಅಲ್ಲದೆ, ಈ ಪ್ರಕರಣದ ತಪ್ಪಿತಸ್ಥರಿಗೆ ದೇಶದ ಅತ್ಯುತ್ತಮ ಕಾನೂನು ತಜ್ಞರ ನೆರವಿನಿಂದ ಅತ್ಯಂತ ಕಠಿಣ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಪ್ರಧಾನಿ ಸೂಚಿಸಿದ್ದಾರೆ ಎಂದು ತಿಳಿಸಿದರು.

ಯುವಕರ ಭವಿಷ್ಯದೊಂದಿಗೆ ಯಾರೂ ಆಟವಾಡದಂತೆ ಬಲವಾದ ಕ್ರಮ ಕೈಗೊಳ್ಳಲಾಗಿದೆ. ಭವಿಷ್ಯದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ನಡೆಯದಂತೆ ತಡೆಯಲು ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ರಾಜಕೀಯ ಪಕ್ಷಭೇದ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಇದು ರಾಜಕೀಯ ವಿಷಯವಲ್ಲ, ರಾಷ್ಟ್ರದ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ ಎಂದು ವಿವರಿಸಿದರು.

## ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿ

**ಹಾಸನ:** ಕರ್ನಾಟಕ ಅರಣ್ಯ ಇಲಾಖೆಯ ಹಾಸನ ವೃತ್ತದಲ್ಲಿ ಖಾಲಿ ಇರುವ 2026-27 ನೇ ಸಾಲಿನ 30+1 (ಹಿಂಬಾಕಿ) ಒಟ್ಟು 31 ಅರಣ್ಯ ವೀಕ್ಷಕ ಗ್ರೂಪ್ ಡಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಾಸನ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

ಆ.1 ರಿಂದ ಆ.31 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ, ಶುಲ್ಕ ಪಾವತಿಸಲು ಸೆ.2 ಕೊನೆಯ ದಿನವಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ಅರಣ್ಯ ಇಲಾಖೆಯ ಜಾಲತಾಣ https// aranaya.gov.in ನ ಮುಖಪುಟದ ಕೆಳಭಾಗದಲ್ಲಿ ನೇಮಕಾತಿ ಶೀರ್ಷಿಕೆ ವೀಕ್ಷಿಸಲು ತಿಳಿಸಲಾಗಿದೆ.

**ಹಾಸನದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ ರವರ ನ್ಯಾಯಾಲಯದಲ್ಲಿ**
ಎಂ.ಎ.ಸಿ: 1857/2010

ಅರ್ಜಿದಾರರು
ಧರ್ಮ ಬಿನ್ ಲೇಟ್ ಈರಯ್ಯ ಸುಮಾರು 43 ವರ್ಷ ಕೆಂಚಮನ ಹೊಸಕೋಟೆ ಗ್ರಾಮ ಮತ್ತು ಹೋಬಳಿ, ಅಲೂರು ತಾಲ್ಲೂಕು
ವಿರುದ್ಧ
ರೆಸ್ಪಾಂಡೆಂಟರು: ಕೆ.ಬಿ ರಾಜಶೇಖರ್

: ಸಾರ್ವಜನಿಕ ಪತ್ರಿಕಾ ಪ್ರಕಟಣೆ ::

ಈ ಸದರಿ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರಾದ ಧರ್ಮ ಬಿನ್ ಲೇಟ್ ಈರಯ್ಯ ಸುಮಾರು 43 ವರ್ಷ, ಕೆಂಚಮನ ಹೊಸಕೋಟೆ ಗ್ರಾಮ ಮತ್ತು ಹೋಬಳಿ, ಆಲೂರು ತಾಲ್ಲೂಕು ರವರು ದಿನಾಂಕ: 28/12/2024 ರಂದು ಅಲೂರು ತಾಲ್ಲೂಕು, ಕೆಂಚಮ್ಮನಹೊಸಕೋಟೆ ಹೋಬಳಿ, ಕೆಂಚಮ್ಮನಹೊಸಕೋಟೆ ಗ್ರಾಮದಲ್ಲಿ ಅನಾರೋಗ್ಯದಿಂದ ಮರಣ ಹೊಂದಿದ್ದು, ಅವರು ಮರಣ ಪೂರ್ವದಲ್ಲಿ ಅವರಿಗೆ ಆದ ಅಪಘಾತಕ್ಕೆ ಈ ಮೇಲ್ಕಂಡ ಪ್ರಕರಣವನ್ನು ಹಾಸನದ ಪ್ರಧಾನ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ. ರವರ ನ್ಯಾಯಾಲಯದಲ್ಲಿ ಅಪಘಾತ ಪರಿಹಾರ ಕೋರಿ ಈ ಮೇಲ್ಕಂಡ ಕೇಸನ್ನು ದಾಖಲು ಮಾಡಿದ್ದು, ಸದರಿ ಕೇಸಿನಲ್ಲಿ ಘನ ನ್ಯಾಯಾಲಯವು ಮೃತ ಅರ್ಜಿದಾರರಾದ ಧರ್ಮ ಬನ್ ಲೇಟ್ ಈರಯ್ಯ ರವರಿಗೆ ರೂ.4.35,544/– ಗಳನ್ನು ಅಪಘಾತ ಪರಿಹಾರ ಘೋಷಿಸಿ ಆದೇಶ ಮಾಡಿರುತ್ತಾರೆ. ಈ ಸಮಯದಲ್ಲಿ ಅರ್ಜಿದಾರರು ಮೃತ ಪಟ್ಟಿರುವುದರಿಂದ ಅವರ ಕಾನೂನು ಬದ್ಧವಾರಸುದಾರರಾದ ಮೃತ ಅರ್ಜಿದಾರರ ಪತ್ನಿಯಾದ ಸುನಿತ ಕೋಂ ಲೇಟ್ ಧರ್ಮ ಹಾಗೂ ಮೃತ ಅರ್ಜಿದಾರರ ಮೈನರ್ ಮಕ್ಕಳಾದ ಸುಮಾರು 16 ವರ್ಷದ ಲೋಲಕ್ಷಿಡಿ ಬಿನ್ ಲೇಟ್ ಧರ್ಮ, ಮತ್ತು ಸುಮಾರು 14 ವರ್ಷದ ಉಮೇಶ,ಡಿ ಬಿನ್ ಲೇಟ್ ಧರ್ಮ ರವರು ಈ ಮೇಲ್ಕಂಡ ಪರಿಹಾರದ ಮೊತ್ತ ರೂ.4,35,544/–ಗಳನ್ನು ನ್ಯಾಯಾಲಯದಿಂದ ಬಿಡಿಸಿಕೊಳ್ಳಲು ಘನ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿರುತ್ತಾರೆ. ಸದರಿ ಅಪಘಾತ ಪ್ರಕರಣವು ಹಾಸನದ ಪ್ರಧಾನ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ ರವರ ನ್ಯಾಯಾಲಯದಲ್ಲಿ ಸದರಿ ಪ್ರಕರಣ ದಿನಾಂಕ : 30/07/2026 ರಂದು ಇರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟವರು ಯಾರಾದರೂ ಹಿತಾಸಕ್ತಿ ಇದ್ದರೆ ಅಂತಹವರುಗಳು ಈ ಮೇಲ್ಕಂಡ ದಿನಾಂಕದಂದು ತಕರಾರು ಸಲ್ಲಿಸಲು ಬೆಳಿಗ್ಗೆ 11.00 ಗಂಟೆಗೆ ಖುದ್ದಾಗಿ ನೀವಾಗಲಿ ನಿಮ್ಮ ಪರ ಮಾಹಿತಿ ಒಪಪಡೆದಿರುವ ವಕೀಲರ ಮೂಲಕ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಇದ್ದಲ್ಲಿ ತಕರಾರು ಸಲ್ಲಿಸಬಹುದು. ಇಲ್ಲದಿದ್ದರೆ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ಸಿ.ಎನ್.ಪುಟ್ಟೇಗೌಡ
ಕೆ.ಎ.ಆರ್.ನಂ–2525/01
ಬಿ.ಎ, ಎಲ್.ಎಲ್.ಬಿ,
ಅರ್ಜಿದಾರರ ಪರ ವಕೀಲರು
ಹಾಸನ ವಕೀಲರ ಸಂಘ,ಹಾಸನ.

ಸ್ಥಳ : ಹಾಸನ
ದಿನಾಂಕ: 21/07/2026

## ಜು.28 ರಂದು ಉದ್ಯಮಶೀಲತಾ ಶಿಬಿರ

• ಪ್ರಜೋದಯ ವರದಿ

**ಹಾಸನ:** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಹಾಸನ ಜಿಲ್ಲೆಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವವರಿಗೆ ಒಂದು ದಿನದ ಉದ್ಯಮಶೀಲತಾ ಶಿಬಿರವನ್ನು ಜು.28 ರಂದು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೋಟರಿ ಪದಾಧಿಕಾರಿಗಳ ಪದಗ್ರಹಣ




• ಪ್ರಜೋದಯ ವರದಿ

**ಹಾಸನ:** ನಗರದ ನಂದಗೋಕುಲ್ ಸಭಾಂಗಣದಲ್ಲಿ ಹಾಸನ ರೋಟರಿ ಮಿಡ್‌ಟೌನ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಡಾ.ಎಂ.ಸಿ ರಂಗಸ್ವಾಮಿ ಅವರು ವೈಜ್ಞಾನಿಕ ಕೃಷಿ ಮತ್ತು ಹೈನುಗಾರಿಕೆ ಕುರಿತು ಮಾತನಾಡಿದರು. ಪದಗ್ರಹಣಾಧಿಕಾರಿ ರೋ. ಪಿಎಚ್‌ಎಫ್ ಡಾ. ಜಗದೀಶ್ ಅವರು ರೋಟರಿ ತತ್ವಗಳು ಮತ್ತು ಧ್ಯೇಯವಾಕ್ಯದ ಕುರಿತು ತಿಳಿಸಿದರು. ಗುಣಮಟ್ಟದ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರಿ ಶಾಲೆಗೆ 80 ಇಂಚಿನ ಟಿವಿಯನ್ನು ಡಾ. ತೇಜಸ್ವಿನಿ ಅವರು ದೇಣಿಗೆಯಾಗಿ ನೀಡಿದರು.

ಈ ವೇಳೆ ನೂತನ ಅಧ್ಯಕ್ಷರಾಗಿ ಎನ್ ವಿಶ್ವನಾಥ್ ಅವರು ಸ್ವೀಕಾರ ಮಾಡಿದರು. ಕಾರ್ಯದರ್ಶಿ ಭವಾನಿ ವಾರ್ಷಿಕ ಯೋಜನೆ ವಿವರಿಸಿದರು.


ಸಹಾಯಕ ಗವರ್ನರ್ ಹಾಗೂ ವಲಯ ನಾಯಕರು ವಾರ್ಷಿಕ ಯೋಜನೆಗಳು ಮತ್ತು ಸೇವಾ ಯೋಜನೆಗಳ ಕುರಿತು ಮಾತನಾಡಿದರು. ಖಜಾಂಚಿ ಎಂ.ಆರ್. ಶಶಿಕಲಾ ಹಾಗೂ ಇನ್ನಿತರರು ಹಾಜರಿದ್ದರು.

### ಶೀಘ್ರವೇ ಜೀರ್ಣೋದ್ಧಾರ ಸಮಿತಿ ರಚನೆ | ಶಾಸಕ ಸಿಮೆಂಟ್ ಮಂಜು

# ಬೆಟ್ಟದ ಭೈರವೇಶ್ವರ: ಪಾವಿತ್ರ್ಯತೆ, ಪ್ರವಾಸೋದ್ಯಮಕ್ಕೂ ಸಮಾನ ಆದ್ಯತೆ

• ಪ್ರಜೋದಯ ವರದಿ

**ಸಕಲೇಶಪುರ:** ಇತಿಹಾಸ ಪ್ರಸಿದ್ಧ ಬೆಟ್ಟದ ಭೈರವೇಶ್ವರ ದೇವಸ್ಥಾನದ ಪಾವಿತ್ರ್ಯ ಕಾಪಾಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರದ ಮಾರ್ಗಸೂಚಿಗಳಂತೆ ಜೀರ್ಣೋದ್ಧಾರ ಸಮಿತಿಯನ್ನು ರಚಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮಸ್ಥರು ಸಲ್ಲಿಸಿರುವ ಸದಸ್ಯರ ಪಟ್ಟಿಯನ್ನು ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದು. ಜಿಲ್ಲಾಧಿಕಾರಿಗಳ ಅನುಮೋದನೆಯ ಬಳಿಕ ಮುಜರಾಯಿ ಇಲಾಖೆಯ ಮೂಲಕ ಜೀರ್ಣೋದ್ಧಾರ ಸಮಿತಿಗೆ ಅಂತಿಮ ರೂಪ ನೀಡಲಾಗುವುದು ಎಂದು ಹೇಳಿದರು.

ದೇವಸ್ಥಾನದಲ್ಲಿ ಫೋಟೋಶೂಟ್ ಸೇರಿದಂತೆ ಕೆಲವು ಚಟುವಟಿಕೆಗಳಿಂದ ಅಹಿತಕರ ಘಟನೆಗಳು ನಡೆದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಕ್ಷೇತ್ರದಲ್ಲಿ ಫೋಟೋಶೂಟ್‌ಗೆ ಹೊಸದಾಗಿ ಅವಕಾಶ ನೀಡಲಾಗಿದೆ ಎಂಬುದು ಸರಿಯಲ್ಲ. ಈ ಹಿಂದೆಯೂ ಭಕ್ತರು ಹಾಗೂ ಪ್ರವಾಸಿಗರು ಬರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕ್ಷೇತ್ರದ ಖ್ಯಾತಿ ಹೆಚ್ಚಿದ ಪರಿಣಾಮ ಪ್ರವಾಸಿಗರ ಸಂಖ್ಯೆಯೂ ಹೆಚ್ಚಿದ್ದು, ನಿರ್ವಹಣೆ ಯಲ್ಲಿ ಕೆಲ ಸವಾಲುಗಳು ಎದು ರಾಗಿವೆ. ಕ್ಷೇತ್ರದ ಪಾವಿತ್ರ್ಯದ ಬಗ್ಗೆ ಸಮರ್ಪಕ ಅರಿವು ಇಲ್ಲದ ಕಾರಣ ಕೆಲವೊಮ್ಮೆ ಅಹಿತಕರ ಘಟನೆಗಳು ನಡೆಯುತ್ತಿವೆ ಎಂದು ಅವರು ಹೇಳಿದರು.



ಈ ಹಿನ್ನೆಲೆಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಭದ್ರತಾ ವ್ಯವಸ್ಥೆ ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲ ಇಲಾಖೆಗಳ ಸಮನ್ವಯದೊಂದಿಗೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪ್ರವಾಸೋದ್ಯಮ ಮತ್ತು ಧಾರ್ಮಿಕ ಪಾವಿತ್ರ್ಯ ಎರಡನ್ನೂ ಸಮತೋಲನದಿಂದ ಕಾಪಾಡುವುದು ಅಗತ್ಯವಾಗಿದೆ. ಪ್ರವಾಸೋದ್ಯಮ ಬೆಳೆಯಬೇಕಾದರೆ ಪ್ರವಾಸಿಗರು ಬರಬೇಕು. ಆದರೆ ಅತಿಯಾದ ನಿರ್ಬಂಧಗಳಿಂದ ಪ್ರವಾಸೋದ್ಯಮಕ್ಕೂ ಹಿನ್ನಡೆಯಾಗಬಾರದು. ಅದೇ ವೇಳೆ ಧಾರ್ಮಿಕ ಕ್ಷೇತ್ರದ ಪಾವಿತ್ರ್ಯಕ್ಕೂ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ನೋಡಿಕೊಳ್ಳುವುದು ನಮ್ಮ ಉದ್ದೇಶ ಎಂದು ಹೇಳಿದರು.

ಅರಣ್ಯ ಇಲಾಖೆ ವಿಧಿಸಿರುವ ಕೆಲವು ನಿರ್ಬಂಧಗಳಿಂದ ಪ್ರವಾಸೋದ್ಯಮಕ್ಕೆ ತೊಂದರೆಯಾಗುತ್ತಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ಹಲವು ಬಾರಿ ತಂದಿರುವುದಾಗಿ ತಿಳಿಸಿದ ಅವರು, ಅರಣ್ಯ ಪ್ರದೇಶಗಳಲ್ಲಿ ಟ್ರೆಕ್ಕಿಂಗ್‌ಗೆ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿ, ನಿಗದಿತ ಶುಲ್ಕ ಪಡೆದು ಅನುಮತಿ ನೀಡುವ ವ್ಯವಸ್ಥೆ ರೂಪಿಸಬೇಕು ಎಂದು ಸಂಬಂಧಪಟ್ಟ ಸಚಿವರು ಹಾಗೂ ಸರ್ಕಾರವನ್ನು ಒತ್ತಾಯಿಸಿದ್ದೇನೆ. ಈ ಕುರಿತು ಇನ್ನೂ ಅಂತಿಮ ನಿರ್ಧಾರವಾಗಿಲ್ಲ. ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿಯೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಶೀಘ್ರ ಪರಿಹಾರ ಕಲ್ಪಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

